# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಸೋಮವಾರ, ೧೫ ಸೆಪ್ಟೆಂಬರ್, ೨೦೨೫ (ಭಾದ್ರಪದ ೨೪, ಶಕವರ್ಷ ೧೯೪೭)<br>BENGALURU, MONDAY, 15 SEPTEMBER, 2025 (BHADRAPADA 24, SHAKAVARSHA 1947) | ನಂ. ೫೯೪<br>No. 594 |
|---|---|---|

ಕರ್ನಾಟಕ ಸರ್ಕಾರ

ಸಂಖ್ಯೆ. ನಅಇ 218 ಬಿಬಿಎಸ್ 2025

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ ಡಾ. ಬಿ ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:15-09-2025

### ಅಧಿಸೂಚನೆ

ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ 36)ರ 36 ಮತ್ತು 68ನೇ ಪ್ರಕರಣದೊಂದಿಗೆ ಓದಿಕೊಂಡು 314ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ, ಗ್ರೇಟರ್ ಬೆಂಗಳೂರು ಆಡಳಿತ (ಮತದಾರರ ನೋಂದಣಿ) ನಿಯಮಗಳು, 2025 ಅನ್ನು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 15 ದಿನಗಳೊಳಗೆ ಅದರಿಂದ ಬಾಧಿತರಾಗಿರುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಹಾಗೂ ಸಲಹೆಗಳನ್ನು ಆಹ್ವಾನಿಸಿ, ಅಧಿಸೂಚನೆ ಸಂಖ್ಯೆ: UDD 218 BBS 2025, ದಿನಾಂಕ: 22-08-2025 ಅನ್ನು ಕರ್ನಾಟಕ ವಿಶೇಷ ರಾಜ್ಯ ಪತ್ರದ ದಿನಾಂಕ:22-08-2025ರ ಭಾಗ-IV(A)ನಲ್ಲಿ ಪ್ರಕಟಿಸಿರುವುದರಿಂದ;

ಮತ್ತು ಸದರಿ ರಾಜ್ಯಪತ್ರವನ್ನು ದಿನಾಂಕ:22-08-2025 ರಿಂದ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸರ್ಕಾರವು, ಈ ಸಂಬಂಧದಲ್ಲಿ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸ್ವೀಕರಿಸದಿರುವುದರಿಂದ;

ಈಗ, ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ, 36)ರ 36 ಮತ್ತು 68ನೇ ಪ್ರಕರಣದೊಂದಿಗೆ ಓದಿಕೊಂಡು 314ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸರ್ಕಾರವು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

### ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ.**- (1) ಈ ನಿಯಮಗಳನ್ನು, ಗ್ರೇಟರ್ ಬೆಂಗಳೂರು ಆಡಳಿತ (ಮತದಾರರ ನೋಂದಣಿ) ನಿಯಮಗಳು, 2025 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳನ್ನು ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು**.- (1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) **''ಅಧಿನಿಯಮ''** ಎಂದರೆ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ 36);

(ಬಿ) **''ಸಹಾಯಕ ಮತದಾರರ ನೋಂದಣಿ ಅಧಿಕಾರಿ'** ಎಂದರೆ 36ನೇ ಪ್ರಕರಣದ ಮೇರೆಗೆ ರಾಜ್ಯ ಚುನಾವಣಾ ಆಯೋಗವು ಗೊತ್ತುಪಡಿಸಿದ ಅಧಿಕಾರಿ;

(ಸಿ) ''ನಮೂನೆ'' ಎಂದರೆ ಈ ನಿಯಮಗಳಿಗೆ ಸೇರಿಸಲಾದ ನಮೂನೆ;

(ಡಿ) **''ನೋಂದಣಿ ಅಧಿಕಾರಿ''** ಎಂದರೆ ಅಧಿನಿಯಮದ 36ನೇ ಪ್ರಕರಣದ ಮೇರೆಗೆ ರಾಜ್ಯ ಚುನಾವಣಾ ಆಯೋಗವು ಗೊತ್ತುಪಡಿಸಿದ ಅಥವಾ ನಾಮನಿರ್ದೇಶಿಸಿದ ಮತದಾರರ ನೋಂದಣಿ ಅಧಿಕಾರಿ;

(ಇ) **''ಪಟ್ಟಿ''** ಎಂದರೆ ನಗರ ಪಾಲಿಕೆಯ ವಾರ್ಡ್‌ಗೆ ಸಿದ್ಧಪಡಿಸಿದ ಮತದಾರರ ಪಟ್ಟಿ;

(ಎಫ್) **''ಪ್ರಕರಣ''** ಎಂದರೆ ಅಧಿನಿಯಮದ ಪ್ರಕರಣ;

(2) ಈ ನಿಯಮಗಳಲ್ಲಿ ಬಳಸಿದ ಆದರೆ ಪರಿಭಾಷಿಸಿರದ ಪದಗಳು ಮತ್ತು ಪದಾವಳಿಗಳು, ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಲಾದಂಥದ್ದೇ ಅರ್ಥವನ್ನು ಹೊಂದಿರತಕ್ಕದ್ದು.

3. **ಮತದಾರರ ಪಟ್ಟಿಯ ಅಳವಡಿಕೆ**.- ನಗರ ಪಾಲಿಕೆಗಳ ವಾರ್ಡ್‌ಗೆ ಮತದಾರರ ಪಟ್ಟಿಯನ್ನು 35ನೇ ಪ್ರಕರಣದ ಮೇರೆಗೆ ಉದ್ದೇಶಿಸಲಾದಂತೆ ಅಗತ್ಯ ಮಾರ್ಪಾಡುಗಳನ್ನು ಸೇರಿಸುವ ಮೂಲಕ ತತ್ಕಾಲದಲ್ಲಿ ಜಾರಿಯಲ್ಲಿರುವ ವಿಧಾನಸಭಾ ಮತದಾರರ ಪಟ್ಟಿಯನ್ನು ಅಳವಡಿಸುವ ಮೂಲಕ ಸಿದ್ಧಪಡಿಸತಕ್ಕದ್ದು:

ಪರಂತು, ನಗರ ಪಾಲಿಕೆಗಳ ಅಂಥ ವಾರ್ಡ್‌ಗಳಿಗೆ ಸಿದ್ಧಪಡಿಸಿದ ಮತದಾರರ ಪಟ್ಟಿಯು, ಅಂಥ ವಾರ್ಡ್‌ನ ಚುನಾವಣೆಗಾಗಿ ನಾಮಪತ್ರವನ್ನು ಸಲ್ಲಿಸುವುದಕ್ಕಾಗಿ ಇರುವ ಕೊನೆಯ ದಿನಾಂಕದ ತರುವಾಯ ಮತ್ತು ಅಂಥ ಚುನಾವಣೆಯು ಪೂರ್ಣಗೊಳ್ಳುವ ಮೊದಲು ಮಾಡಿದ ಯಾವುದೇ ನಮೂದಿನ ತಿದ್ದುಪಡಿ, ಬದಲಾವಣೆ, ಸೇರ್ಪಡೆ ಅಥವಾ ತೆಗೆದುಹಾಕುವುದನ್ನು ಒಳಗೊಂಡಿರತಕ್ಕದ್ದಲ್ಲ.

4. **ಭಾಗಗಳಲ್ಲಿ ಪಟ್ಟಿಯನ್ನು ಸಿದ್ಧಪಡಿಸುವುದು**.- ಪ್ರತಿಯೊಂದು ವಾರ್ಡ್‌ಗೆ ಸಂಬಂಧಿಸಿದ ಮತದಾರರ ಪಟ್ಟಿಯನ್ನು, ರಾಜ್ಯ ಚುನಾವಣಾ ಆಯೋಗವು ನಮೂನೆ ಸಂಖ್ಯೆ.1ರಲ್ಲಿ ನಿರ್ದೇಶಿಸಬಹುದಾದಂತೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಸಿದ್ಧಪಡಿಸತಕ್ಕದ್ದು. ಪಟ್ಟಿಯನ್ನು, ಅನುಕ್ರಮವಾಗಿ ಅಂಕಿ ಸಂಖ್ಯೆ ನೀಡತಕ್ಕ ಅನುಕೂಲಕರ ವಿಭಾಗಗಳಾಗಿ ವಿಂಗಡಿಸಬಹುದು.

5. **ಹೆಸರುಗಳ ಅನುಕ್ರಮಣಿಕೆ**.- (1) ಮತದಾರರ ಪಟ್ಟಿಯಲ್ಲಿ ಅಥವಾ ಸಂದರ್ಭಾನುಸಾರ ಮತದಾರರ ಪಟ್ಟಿಯ ಪ್ರತಿಯೊಂದು ಭಾಗದಲ್ಲಿ ಮತದಾರರ ಹೆಸರುಗಳನ್ನು ಮನೆ ಸಂಖ್ಯೆಗೆ ಅನುಸಾರವಾಗಿ ಕ್ರಮಬದ್ಧಗೊಳಿಸತಕ್ಕದ್ದು.

(2) ಮತದಾರರ ಪಟ್ಟಿಯ ಪ್ರತಿಯೊಂದು ಭಾಗದಲ್ಲಿ ಮತದಾರರ ಹೆಸರುಗಳಿಗೆ ಕಾರ್ಯಸಾಧ್ಯವಾದಷ್ಟು ಮಟ್ಟಿಗೆ, ಸಂಖ್ಯೆ ಒಂದರಿಂದ ಪ್ರಾರಂಭಿಸಿ ಕ್ರಮಾನುಗತವಾಗಿ ಪ್ರತ್ಯೇಕ ಸಂಖ್ಯಾಸರಣಿಗಳಲ್ಲಿ ಸಂಖ್ಯೆ ನೀಡತಕ್ಕದ್ದು.

6. **ವಾಸದ ಮನೆಗಳ ನಿವಾಸಿಗಳು ನೀಡಬೇಕಾದ ಮಾಹಿತಿ ಮತ್ತು ಗಣತಿದಾರರ ನೇಮಕಾತಿ**.- (1) ನೋಂದಣಿ ಅಧಿಕಾರಿಯು, ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಉದ್ದೇಶಕ್ಕಾಗಿ, ನಮೂನೆ

ಸಂಖ್ಯೆ. 2 ರಲ್ಲಿ, ಆ ಉದ್ದೇಶಕ್ಕಾಗಿ ಅಧಿಕೃತಗೊಂಡಿರುವ ಆತನ ಸಹಾಯಕನ ಮುಖಾಂತರ ವಾರ್ಡು ಅಥವಾ ಅದರ ಯಾವುದೇ ಭಾಗದಲ್ಲಿ ವಾಸಿಸುತ್ತಿರುವ ಮನೆಗಳ ನಿವಾಸಿಗಳಿಗೆ ಕೋರಿಕೆ ಪತ್ರಗಳನ್ನು ನೀಡತಕ್ಕದ್ದು ಮತ್ತು ಯಾವುದೇ ಅಂಥ ಪತ್ರವನ್ನು ಸ್ವೀಕರಿಸುವ ಪ್ರತಿಯೊಬ್ಬ ವ್ಯಕ್ತಿಯು, ಕೋರಿಕೆ ಪತ್ರವನ್ನು ನೀಡಿರುವ ವ್ಯಕ್ತಿಗೆ ಆತನ ಸಾಮರ್ಥ್ಯವಿರುವ ಮಟ್ಟಿಗೆ ಅದರಲ್ಲಿ ಕೋರಲಾದ ಮಾಹಿ ಯನ್ನು ಒದಗಿಸತಕ್ಕದ್ದು.

(2) ಒಬ್ಬ ವ್ಯಕ್ತಿಯು ಸಂಬಂಧಪಟ್ಟ ಸಮಯದಲ್ಲಿ ಆ ಸ್ಥಳದಲ್ಲಿ ಸಾಮಾನ್ಯವಾಗಿ ವಾಸಿಸುತ್ತಿರುವನೇ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದ ಸಂದರ್ಭದಲ್ಲಿ, ನಮೂನೆ ಸಂಖ್ಯೆ 2ರಲ್ಲಿ ನಿರ್ದಿಷ್ಟಪಡಿಸಲಾದ ಸೂಚನೆಗಳನ್ನು ರಾಜ್ಯ ಚುನಾವಣಾ ಆಯೋಗವು ವ್ಯಕ್ತಿಯ ಸಾಮಾನ್ಯ ನಿವಾಸದ ನಿರ್ಧರಣೆಗಾಗಿ ಪರಿಗಣಿಸಬಹುದು.

(3) ಇಲಾಖೆಗಳ ಮುಖ್ಯಸ್ಥರು, ಕಛೇರಿಗಳ ಮುಖ್ಯಸ್ಥರು ಮತ್ತು ಸ್ಥಳೀಯ ಪ್ರಾಧಿಕಾರಗಳು, ಮತದಾರರ ನೋಂದಣಿ ಅಧಿಕಾರಿಯ ಕೋರಿಕೆ ಮೇಲೆ, ಗಣತಿದಾರರಾಗಿ ಮತ್ತು ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸುವುದಕ್ಕಾಗಿ ಅಥವಾ ಮತದಾರರ ಪಟ್ಟಿಯ ತಯಾರಿಕೆ ಅಥವಾ ಪರಿಷ್ಕರಣೆಯಲ್ಲಿ ಸಹಾಯ ಮಾಡಲು ಅನುದಾನಿತ ಅಥವಾ ಮಾನ್ಯತೆ ಪಡೆದ ಶಾಲೆಗಳು ಮತ್ತು ಸಂದರ್ಭಾನುಸಾರ ಸ್ಥಳೀಯ ಪ್ರಾಧಿಕಾರಗಳ ನೌಕರರನ್ನೂ ಒಳಗೊಂಡಂತೆ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಶಿಕ್ಷಕರು ಮತ್ತು ನೌಕರರು ಸೇವೆಗಳನ್ನು ಒದಗಿಸತಕ್ಕದ್ದು. ಮತದಾರರ ಪಟ್ಟಿಯ ತಯಾರಿಕೆ ಅಥವಾ ಪರಿಷ್ಕರಣೆಯಲ್ಲಿ ಸಹಾಯ ಮಾಡಲು ನೇಮಕಗೊಂಡ ಗಣತಿದಾರರು, ಮೇಲ್ವಿಚಾರಕರು ಮತ್ತು ಅಂತಹ ವ್ಯಕ್ತಿಗಳು ನಿಗದಿತ ಅವಧಿಯೊಳಗೆ ಕೆಲಸವನ್ನು ಪೂರ್ಣಗೊಳಿಸುವುದಾದಲ್ಲಿ ಅರೆಕಾಲಿಕ ಅಥವಾ ಪೂರ್ಣಾವಧಿ ಕೆಲಸ ಮಾಡಲು ಅನುಮತಿಸಬಹುದು.

7. **ಕೆಲವು ರಿಜಿಸ್ಟರ್‌ಗಳನ್ನು ಪರಿಶೀಲಿಸುವ ಅವಕಾಶ.**- ಯಾವುದೇ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಅಥವಾ ಪಟ್ಟಿಗೆ ಸಂಬಂಧಿಸಿದ ಯಾವುದೇ ಕ್ಲೇಮು ಅಥವಾ ಆಕ್ಷೇಪಣೆಯನ್ನು ನಿರ್ಣಯಿಸುವ ಉದ್ದೇಶಕ್ಕಾಗಿ, ಯಾರೇ ನೋಂದಣಿ ಅಧಿಕಾರಿ ಮತ್ತು ಆತನು ನಿಯೋಜಿಸಿದ ಯಾರೇ ವ್ಯಕ್ತಿಯು, ಜನನ ಮತ್ತು ಮರಣಗಳ ಯಾವುದೇ ರಿಜಿಸ್ಟರ್ ಮತ್ತು ಯಾವುದೇ ಶೈಕ್ಷಣಿಕ ಸಂಸ್ಥೆಯ ಪ್ರವೇಶಾತಿ ರಿಜಿಸ್ಟರನ್ನು ಪರಿಶೀಲಿಸುವ ಅವಕಾಶವನ್ನು ಹೊಂದಿರತಕ್ಕದ್ದು ಮತ್ತು ಸದರಿ ಅಧಿಕಾರಿ ಅಥವಾ ವ್ಯಕ್ತಿಗೆ ಅಂಥ ಮಾಹಿತಿಯನ್ನು ನೀಡುವುದು ಮತ್ತು ಆತನು ಅಗತ್ಯಪಡಿಸಬಹುದಾದಂಥ ಆ ರಿಜಿಸ್ಟರ್‌ನಿಂದ ಅಂಥ ಉದ್ಧೃತ ಭಾಗಗಳನ್ನು ನೀಡುವುದು ಅಂಥ ಯಾವುದೇ ರಿಜಿಸ್ಟರ್‌ನ ಪ್ರಭಾರ ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿರತಕ್ಕದ್ದು.

8. **ಕರಡು ಮತದಾರರ ಪಟ್ಟಿಯ ಪ್ರಕಟಣೆ.**- ಒಂದು ವಾರ್ಡಿಗೆ ಮತದಾರರ ಪಟ್ಟಿಯು ಸಿದ್ಧವಾದ ಕೂಡಲೇ ನೋಂದಣಿ ಅಧಿಕಾರಿಯು, ಅದರ ಪ್ರತಿಯು ಪರಿಶೀಲನೆಗೆ ಲಭ್ಯವಾಗುವಂತೆ ಮಾಡುವ ಮೂಲಕ ಕರಡು ರೂಪದಲ್ಲಿ ಅದನ್ನು ಪ್ರಕಟಿಸತಕ್ಕದ್ದು ಮತ್ತು ನಮೂನೆ ಸಂಖ್ಯೆ. 3 ರಲ್ಲಿ, ಆತನ ಕಛೇರಿಯಲ್ಲಿ, ಮತಗಟ್ಟೆಗಳಲ್ಲಿ ಮತ್ತು ಇತರ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ನೋಟೀಸನ್ನು ಪ್ರದರ್ಶಿಸತಕ್ಕದ್ದು.

9. **ಪಟ್ಟಿ ಮತ್ತು ನೋಟೀಸಿನ ಬಗ್ಗೆ ಹೆಚ್ಚಿನ ಪ್ರಚಾರ.**- ನೋಂದಣಿ ಅಧಿಕಾರಿಯು, -

(ಎ) ನೋಟೀಸಿನ ಪ್ರತಿಯ ಜೊತೆಗೆ, ಮತದಾರರ ಪಟ್ಟಿಯ ಪ್ರತಿಯೊಂದು ಪ್ರತ್ಯೇಕ ವಿಭಾಗದ ಪ್ರತಿಯನ್ನು ನಮೂನೆ ಸಂಖ್ಯೆ. 3ರಲ್ಲಿ ಸಾರ್ವಜನಿಕರಿಗೆ ಪ್ರವೇಶ ಸಾಧ್ಯವಾಗಬಹುದಾದ ನಿರ್ದಿಷ್ಟಪಡಿಸಲಾದ ಸ್ಥಳದಲ್ಲಿ ಮತ್ತು ನಗರ ಪಾಲಿಕೆ ಅಥವಾ ಸಂಬಂಧಿಸಿದ ಪ್ರಾಧಿಕಾರದ ಅಧಿಕೃತ ವೆಬ್ ಸೈಟ್‌ನಲ್ಲಿ ಸಹ ಪರಿಶೀಲನೆಗೆ ಲಭ್ಯವಾಗುವಂತೆ ಮಾಡತಕ್ಕದ್ದು;

(ಬಿ) ನೋಟೀಸಿಗೆ ಸಂಬಂಧಿಸಿದಂತೆ ನಮೂನೆ ಸಂಖ್ಯೆ. 3ರಲ್ಲಿ ರಾಜ್ಯ ಚುನಾವಣಾ ಆಯೋಗವು ನಿರ್ದಿಷ್ಟಪಡಿಸಬಹುದಾದಂಥ ಹೆಚ್ಚಿನ ಪ್ರಚಾರವನ್ನು ನೀಡತಕ್ಕದ್ದು; ಮತ್ತು

(ಸಿ) ಮತದಾರರ ಪಟ್ಟಿಯ ಪ್ರತಿಯೊಂದು ಭಾಗದ ಎರಡು ಪ್ರತಿಗಳನ್ನು ಪ್ರತಿಯೊಂದು ನೋಂದಾಯಿತ, ಮಾನ್ಯತೆ ಪಡೆದ ರಾಷ್ಟ್ರೀಯ ರಾಜಕೀಯ ಪಕ್ಷಗಳು ಮತ್ತು ಕರ್ನಾಟಕ ರಾಜ್ಯದಲ್ಲಿನ ರಾಜ್ಯ ನೋಂದಾಯಿತ, ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ಉಚಿತವಾಗಿ ಒದಗಿಸತಕ್ಕದ್ದು.

10. **ಕ್ಲೇಮುಗಳು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿ.**- ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸುವುದಕ್ಕೆ ಸಂಬಂಧಿಸಿದ ಪ್ರತಿಯೊಂದು ಕ್ಲೇಮು ಮತ್ತು ಅದರಲ್ಲಿನ ನಮೂದುವಿನ ಬಗೆಗಿನ ಪ್ರತಿಯೊಂದು ಆಕ್ಷೇಪಣೆಯನ್ನು, 8ನೇ ನಿಯಮದ ಮೇರೆಗೆ ಪಟ್ಟಿ ಪ್ರಕಟವಾದ ದಿನಾಂಕದಿಂದ ಏಳು ದಿನಗಳ ಅವಧಿಯೊಳಗಾಗಿ ಸಲ್ಲಿಸತಕ್ಕದ್ದು:

ಪರಂತು, ರಾಜ್ಯ ಚುನಾವಣಾ ಆಯೋಗವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಸಂಪೂರ್ಣವಾಗಿ ವಾರ್ಡಿಗೆ ಸಂಬಂಧಿಸಿದಂತೆ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಪಟ್ಟಂತೆ ಅವಧಿಯನ್ನು ವಿಸ್ತರಿಸಬಹುದು.

11. **ಕ್ಲೇಮುಗಳು ಮತ್ತು ಆಕ್ಷೇಪಣೆಗಳ ನಮೂನೆ.**- (1) ಅದರಲ್ಲಿರುವ ಹೆಸರಿನ ಸೇರ್ಪಡೆಗೆ ಸಂಬಂಧಿಸಿದ ಪ್ರತಿಯೊಂದು ಕ್ಲೇಮು,-

(ಎ) ಹೆಸರಿನ ಸೇರ್ಪಡೆಗೆ ಇರುವ ನಮೂನೆ ಸಂಖ್ಯೆ. 4ರಲ್ಲಿ ಇರತಕ್ಕದ್ದು;

(ಬಿ) ಮತದಾರರ ಪಟ್ಟಿಯಲ್ಲಿ ತನ್ನ ಹೆಸರನ್ನು ಸೇರಿಸಲು ಬಯಸುವ ವ್ಯಕ್ತಿಯು ಸಹಿ ಮಾಡಿರತಕ್ಕದ್ದು; ಮತ್ತು

(ಸಿ) ಕ್ಲೇಮುದಾರನು ತನ್ನ ಹೆಸರನ್ನು ಸೇರಿಸಬೇಕೆಂದು ಇಚ್ಛಿಸಿರುವ ಪಟ್ಟಿಯಲ್ಲಿ ಈಗಾಗಲೇ ಯಾರ ಹೆಸರನ್ನು ಸೇರಿಸಲಾಗಿದೆಯೋ ಆ ಮತ್ತೊಬ್ಬ ವ್ಯಕ್ತಿಯು ಮೇಲು ರುಜು ಮಾಡತಕ್ಕದ್ದು.

(2) ಮತದಾರರ ಪಟ್ಟಿಯಲ್ಲಿ ಹೆಸರಿನ ಸೇರ್ಪಡೆಗಾಗಿನ ಪ್ರತಿಯೊಂದು ಆಕ್ಷೇಪಣೆಯು,-

(ಎ) ನಮೂನೆ ಸಂಖ್ಯೆ. 5 ರಲ್ಲಿರತಕ್ಕದ್ದು (ಹೆಸರಿನ ಸೇರ್ಪಡೆಗಾಗಿ ಆಕ್ಷೇಪಣೆ);

(ಬಿ) ಈಗಾಗಲೇ ಯಾರ ಹೆಸರನ್ನು ಆ ಮತದಾರರ ಪಟ್ಟಿಯಲ್ಲಿ ಸೇರಿಸಲಾಗಿದೆಯೋ ಆ ವ್ಯಕ್ತಿಯು ಮಾತ್ರ ಸಲ್ಲಿಸತಕ್ಕದ್ದು; ಮತ್ತು

(ಸಿ) ಆಕ್ಷೇಪಿತ ಹೆಸರು ಇರುವ ಪಟ್ಟಿಯಲ್ಲಿ ಈಗಾಗಲೇ ಯಾರ ಹೆಸರನ್ನು ಸೇರಿಸಲಾಗಿದೆಯೋ ಆ ಮತ್ತೊಬ್ಬ ವ್ಯಕ್ತಿಯು ಮೇಲು ರುಜು ಮಾಡತಕ್ಕದ್ದು; ಮತ್ತು

(3) ಪಟ್ಟಿಯಲ್ಲಿನ ನಮೂದುವಿನಲ್ಲಿನ ನಿರ್ದಿಷ್ಟ ವಿವರ ಅಥವಾ ವಿವರಗಳಿಗೆ ಸಂಬಂಧಿಸಿದ ಪ್ರತಿಯೊಂದು ಆಕ್ಷೇಪಣೆಯು,-

(ಎ) ನಮೂನೆ ಸಂಖ್ಯೆ. 6ರಲ್ಲಿ ಇರತಕ್ಕದ್ದು (ನಮೂದುವಿನಲ್ಲಿನ ವಿವರಗಳಿಗೆ ಸಂಬಂಧಿಸಿದ ಆಕ್ಷೇಪಣೆ); ಮತ್ತು

(ಬಿ) ಆ ನಮೂದು ಯಾರಿಗೆ ಸಂಬಂಧಿಸಿದೆಯೋ ಆ ವ್ಯಕ್ತಿಯು ಮಾತ್ರ ಸಲ್ಲಿಸತಕ್ಕದ್ದು.

(4) ಪಟ್ಟಿಯ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ನಮೂದನ್ನು ಸ್ಥಳಾಂತರಿಸುವ ಪ್ರತಿಯೊಂದು ಅರ್ಜಿಯು ನಮೂನೆ ಸಂಖ್ಯೆ. 7 ರಲ್ಲಿರಬೇಕು.

(5) ಮತದಾರರ ಪಟ್ಟಿಯಿಂದ ಹೆಸರನ್ನು ತೆಗೆದುಹಾಕಲು ಸಲ್ಲಿಸುವ ಪ್ರತಿಯೊಂದು ಅರ್ಜಿಯನ್ನು,-

(ಎ) ನಮೂನೆ ಸಂಖ್ಯೆ ೮ ರಲ್ಲಿ (ಮತದಾರರ ಪಟ್ಟಿಯಲ್ಲಿ ನಮೂದನ್ನು ಅಳಿಸುವುದು) ಸಲ್ಲಿಸುವುದು;

(ಬಿ) ಆ ಮತದಾರರ ಪಟ್ಟಿಯಲ್ಲಿ ಈಗಾಗಲೇ ಹೆಸರು ಸೇರ್ಪಡೆಗೊಂಡಿರುವ ವ್ಯಕ್ತಿ ಮಾತ್ರ ಸಲ್ಲಿಸುವುದು;

12. **ಕ್ಲೇಮುಗಳು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ವಿಧಾನ.**- (1) ಪ್ರತಿಯೊಂದು ಕ್ಲೇಮು ಅಥವಾ ಆಕ್ಷೇಪಣೆಯನ್ನು,-

(ಎ) ನೋಂದಣಿ ಅಧಿಕಾರಿಗಾಗಲಿ ಅಥವಾ ಈ ಬಗ್ಗೆ ಗೊತ್ತುಪಡಿಸಬಹುದಾದಂಥ ಇತರ ಅಧಿಕಾರಿಗಾಗಲಿ ಸಲ್ಲಿಸತಕ್ಕದ್ದು; ಅಥವಾ

(ಬಿ) ನೋಂದಣಿ ಅಧಿಕಾರಿಗೆ ಅಂಚೆ ಮೂಲಕ ಕಳುಹಿಸತಕ್ಕದ್ದು.

(2) ನಗರ ಪಾಲಿಕೆ ಅಥವಾ ಸಂಬಂಧಪಟ್ಟ ಪ್ರಾಧಿಕಾರದ ಅಧಿಕೃತ ವೆಬ್‌ಸೈಟ್‌ನಲ್ಲಿ ಸೂಕ್ತ ಲಿಂಕ್ ಹೊಂದಿರುವ ಮೊಬೈಲ್ ಅಪ್ಲಿಕೇಶನ್ ಸೇರಿದಂತೆ ಮಾಹಿತಿ ತಂತ್ರಜ್ಞಾನ ಆಧಾರಿತ ಆನ್‌ಲೈನ್ ವ್ಯವಸ್ಥೆಯ ಮೂಲಕವೂ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಅವಕಾಶವನ್ನು ಒದಗಿಸಬಹುದು.

13. **ಗೊತ್ತುಪಡಿಸಿದ ಅಧಿಕಾರಿಯು ಅನುಸರಿಸಬೇಕಾದ ಕಾರ್ಯವಿಧಾನ.**- (1) ಈ ಉದ್ದೇಶಕ್ಕಾಗಿ ಗೊತ್ತುಪಡಿಸಿದ ಪ್ರತಿಯೊಬ್ಬ ಅಧಿಕಾರಿಯು,-

(ಎ) ಕ್ಲೇಮುಗಳ ಪಟ್ಟಿಯನ್ನು ನಮೂನೆ ಸಂಖ್ಯೆ. 9 ರಲ್ಲಿ (ನಮೂನೆ ಸಂಖ್ಯೆ, 4 ರಿಂದ ಪಡೆದುಕೊಂಡ ವಿವರಗಳು), ಹೆಸರುಗಳ ಸೇರ್ಪಡೆಗಾಗಿ ಸಲ್ಲಿಸಿದ ಆಕ್ಷೇಪಣೆಗಳ ಪಟ್ಟಿಯನ್ನು ನಮೂನೆ ಸಂಖ್ಯೆ. 10ರಲ್ಲಿ (ನಮೂನೆ ಸಂಖ್ಯೆ. 5 ರಿಂದ ಪಡೆದ ವಿವರಗಳು), ವಿವರಗಳಿಗೆ ಸಂಬಂಧಿಸಿದ ಆಕ್ಷೇಪಣೆಗಳ ಪಟ್ಟಿಯನ್ನು ನಮೂನೆ ಸಂಖ್ಯೆ. 11 ರಲ್ಲಿ (ನಮೂನೆ ಸಂಖ್ಯೆ. 6 ರಿಂದ ಪಡೆದ ವಿವರಗಳು), ನಮೂದು ಬದಲಾವಣೆಯ ಪಟ್ಟಿಯನ್ನು ನಮೂನೆ ಸಂಖ್ಯೆ. 11-ಎ ರಲ್ಲಿ (ನಮೂನೆ ಸಂಖ್ಯೆ. 7 ರಿಂದ ಪಡೆದ ವಿವರಗಳು) ಮತ್ತು ನಮೂದಿಸುವುದನ್ನು ಬಿಟ್ಟಿರುವುದರ ಪಟ್ಟಿಯನ್ನು ನಮೂನೆ ಸಂಖ್ಯೆ. 11-ಬಿ ಯಲ್ಲಿ (ನಮೂನೆ ಸಂಖ್ಯೆ. 8 ರಿಂದ ಪಡೆದ ವಿವರಗಳು) ದ್ವಿಪ್ರತಿಯಲ್ಲಿ ನಿರ್ವಹಿಸತಕ್ಕದ್ದು; ಮತ್ತು

(ಬಿ) ಅವರ ಕಚೇರಿಯಲ್ಲಿನ ಸೂಚನಾ ಫಲಕದಲ್ಲಿ ಅಂಥ ಪ್ರತಿಯೊಂದು ಪಟ್ಟಿಯ ಒಂದು ಪ್ರತಿಯನ್ನು ಪ್ರದರ್ಶಿಸತಕ್ಕದ್ದು.

(2) ಕ್ಲೇಮು ಅಥವಾ ಆಕ್ಷೇಪಣೆಯನ್ನು ಆತನಿಗೆ ಸಲ್ಲಿಸಿದಲ್ಲಿ, ಆತನು, (1) ನೇ ಉಪ-ನಿಯಮದ ಅಗತ್ಯತೆಯನ್ನು ಪೂರೈಸಿದ ತರುವಾಯ, ಆತನು ಯುಕ್ತವೆಂದು ಪರಿಗಣಿಸಬಹುದಾದಂಥ ಷರಾಗಳು ಯಾವುವಾದರೂ ಇದ್ದರೆ ಅವುಗಳೊಂದಿಗೆ ನೋಂದಣಿ ಅಧಿಕಾರಿಗೆ ಅದನ್ನು ಕಳುಹಿಸತಕ್ಕದ್ದು.

14. **ನೋಂದಣಿ ಅಧಿಕಾರಿಯು ಅನುಸರಿಸಬೇಕಾದ ಕಾರ್ಯವಿಧಾನ.**- ನೋಂದಣಿ ಅಧಿಕಾರಿಯು,-

(ಎ) 12 ನೇ ನಿಯಮದ ಮೇರೆಗೆ ನೇರವಾಗಿಯಾಗಲಿ ಅಥವಾ 13 ನೇ ನಿಯಮದ ಮೇರೆಗೆ ಕಳುಹಿಸಿದ ಮೇಲಾಗಲಿ ಆತನು ಸ್ವೀಕರಿಸಲಾದ ಪ್ರತಿಯೊಂದು ಕ್ಲೇಮು ಅಥವಾ ಸಂದರ್ಭಾನುಸಾರ

ಆಕ್ಷೇಪಣೆಯ ವಿವರಗಳನ್ನು ಅದರಲ್ಲಿ ನಮೂದಿಸಿ 9, 10, 11, 11-ಎ ಮತ್ತು 11-ಬಿ ನಮೂನೆಗಳಲ್ಲಿರುವ ಪಟ್ಟಿಗಳನ್ನು ದ್ವಿಪ್ರತಿಯಲ್ಲಿ ನಿರ್ವಹಿಸತಕ್ಕದ್ದು; ಮತ್ತು

(ಬಿ) ಅವರ ಕಚೇರಿಯಲ್ಲಿನ ಸೂಚನಾ ಫಲಕದ ಮೇಲೆ ಪ್ರತಿಯೊಂದು ಅಂಥ ಪಟ್ಟಿಯ ಒಂದು ಪ್ರತಿಯನ್ನು ಪ್ರದರ್ಶಿಸತಕ್ಕದ್ದು.

15. **ಕೆಲವು ಕ್ಲೇಮುಗಳು ಮತ್ತು ಆಕ್ಷೇಪಣೆಗಳನ್ನು ತಿರಸ್ಕರಿಸುವುದು.-** ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಥವಾ ಇದರಲ್ಲಿ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಸಲ್ಲಿಸದಿರುವ ಯಾವುದೇ ಕ್ಲೇಮು ಅಥವಾ ಆಕ್ಷೇಪಣೆಯನ್ನು, ನೋಂದಣಿ ಅಧಿಕಾರಿಯು ತಿರಸ್ಕರಿಸತಕ್ಕದ್ದು.

16. **ಪರಿಶೀಲಿಸಿದ ಕ್ಲೇಮುಗಳು ಮತ್ತು ಆಕ್ಷೇಪಣೆಗಳನ್ನು ಅಂಗೀಕರಿಸುವುದು.-** ನೋಂದಣಿ ಅಧಿಕಾರಿಗೆ, ಯಾವುದೇ ಕ್ಲೇಮು ಅಥವಾ ಆಕ್ಷೇಪಣೆಯ ಸಿಂಧುತ್ವದ ಬಗ್ಗೆ ಮನವರಿಕೆಯಾದರೆ, ಆತನು, 14ನೇ ನಿಯಮದ (ಬಿ) ಖಂಡದ ಮೇರೆಗೆ ತಾನು ಪ್ರದರ್ಶಿಸಿದ ಪಟ್ಟಿಯಲ್ಲಿ ಅದನ್ನು ನಮೂದಿಸಿರುವ ದಿನಾಂಕದಿಂದ ಒಂದು ವಾರ ಮುಕ್ತಾಯಗೊಂಡ ನಂತರ ಮುಂದುವರೆದ ಪರಿಶೀಲನೆ ನಡೆಸದೇ ಅದನ್ನು ಅನುಮತಿಸತಕ್ಕದ್ದು.

ಪರಂತು, ಅಂಥ ಯಾವುದೇ ಕ್ಲೇಮು ಅಥವಾ ಆಕ್ಷೇಪಣೆಯನ್ನು ಪುರಸ್ಕರಿಸುವ ಮೊದಲು, ಯಾರೇ ವ್ಯಕ್ತಿಯು ವಿಚಾರಣೆಗಾಗಿ ನೋಂದಣಿ ಅಧಿಕಾರಿಗೆ ಲಿಖಿತದಲ್ಲಿ ಒತ್ತಾಯಪಡಿಸಿದಲ್ಲಿ, ಅದನ್ನು ಹೆಚ್ಚಿನ ವಿಚಾರಣೆಯಿಲ್ಲದೆ ಸ್ವೀಕರಿಸತಕ್ಕದ್ದಲ್ಲ. :

17. **ಕ್ಲೇಮುಗಳು ಮತ್ತು ಆಕ್ಷೇಪಣೆಗಳ ವಿಚಾರಣಾ ನೋಟೀಸು.-** (1) 15ನೇ ನಿಯಮ ಅಥವಾ 16ನೇ ನಿಯಮದ ಮೇರೆಗೆ ಕ್ಲೇಮು ಅಥವಾ ಆಕ್ಷೇಪಣೆಯನ್ನು ವಿಲೇ ಮಾಡದಿದ್ದಲ್ಲಿ, ನೋಂದಣಿ ಅಧಿಕಾರಿಯು,-

(ಎ) 14ನೇ ನಿಯಮದ (ಬಿ) ಖಂಡದ ಮೇರೆಗೆ ಅವರು ಪ್ರದರ್ಶಿಸಿದ ಪಟ್ಟಿಯಲ್ಲಿ, ಕ್ಲೇಮು ಅಥವಾ ಆಕ್ಷೇಪಣೆಯ ವಿಚಾರಣಾ ದಿನಾಂಕ, ಸಮಯ ಮತ್ತು ಸ್ಥಳವನ್ನು ನಿರ್ದಿಷ್ಟಪಡಿಸತಕ್ಕದ್ದು; ಮತ್ತು

(ಬಿ) ವಿಚಾರಣಾ ನೋಟೀಸನ್ನು,-

i. ಕ್ಲೇಮಿನ ಸಂದರ್ಭದಲ್ಲಿ, ಕ್ಲೇಮುದಾರನಿಗೆ ನಮೂನೆ ಸಂಖ್ಯೆ. 12 ರಲ್ಲಿ ;

ii. ಹೆಸರನ್ನು ಸೇರಿಸುವುದಕ್ಕೆ ಆಕ್ಷೇಪಣೆ ಮಾಡಿದ ಸಂದರ್ಭದಲ್ಲಿ, ಆಕ್ಷೇಪಣೆಕಾರನಿಗೆ ನಮೂನೆ ಸಂಖ್ಯೆ. 13 ರಲ್ಲಿ ಮತ್ತು ಆಕ್ಷೇಪಿತ ವ್ಯಕ್ತಿಗೆ ನಮೂನೆ ಸಂಖ್ಯೆ. 14 ರಲ್ಲಿ; ಮತ್ತು

iii. ನಮೂದುವಿನಲ್ಲಿನ ವಿವರಗಳಿಗೆ ಸಂಬಂಧಿಸಿದ ಆಕ್ಷೇಪಣೆಗಳ ಸಂದರ್ಭದಲ್ಲಿ, ಆಕ್ಷೇಪಣೆಕಾರನಿಗೆ ನಮೂನೆ ಸಂಖ್ಯೆ. 15 ರಲ್ಲಿ ನೀಡತಕ್ಕದ್ದು.

(2) ಈ ನಿಯಮದ ಮೇರೆಗೆ ಖುದ್ದಾಗಿ ಅಥವಾ ಈ ಬಗ್ಗೆ ವಿದ್ಯುಕ್ತವಾಗಿ ಅಧಿಕೃತಗೊಳಿಸಿದ ವ್ಯಕ್ತಿಯ ಮೂಲಕ ಅಥವಾ ನೋಂದಾಯಿತ ಅಂಚೆ ಮೂಲಕ ಅಥವಾ ತಲುಪೊಪ್ಪಿಗೆ ಶೀಘ್ರ ಅಂಚೆ ಮೂಲಕ ಅಥವಾ ವ್ಯಕ್ತಿಯ ನಿವಾಸ / ಸ್ಥಳಕ್ಕೆ ಅಥವಾ ವಾರ್ಡಿನ ವ್ಯಾಪ್ತಿಯೊಳಗೆ ಕಡೆಯದಾಗಿ ತಿಳಿದುಬಂದ ನಿವಾಸ / ಸ್ಥಳಕ್ಕೆ ಅದನ್ನು ಅಂಟಿಸುವ ಮೂಲಕ ನೋಟೀಸನ್ನು ನೀಡಬಹುದು.

18. **ಕ್ಲೇಮುಗಳು ಮತ್ತು ಆಕ್ಷೇಪಣೆಗಳ ಪರಿಶೀಲನೆ.-** (1) ನೋಂದಣಿ ಅಧಿಕಾರಿಯು, 17ನೇ ನಿಯಮದ ಮೇರೆಗೆ ನೋಟೀಸನ್ನು ನೀಡಿರುವುದಕ್ಕೆ ಸಂಬಂಧಿಸಿದ ಪ್ರತಿಯೊಂದು ಕ್ಲೇಮು ಅಥವಾ ಆಕ್ಷೇಪಣೆಯ ಬಗೆಗಿನ ಕ್ಷಿಪ್ರ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಅದರ ಮೇಲಿನ ತನ್ನ ತೀರ್ಮಾನವನ್ನು ದಾಖಲಿಸತಕ್ಕದ್ದು.

(2) ಪರಿಶೀಲನೆ ಸಮಯದಲ್ಲಿ, ಕ್ಲೇಮುದಾರನು ಅಥವಾ ಸಂದರ್ಭಾನುಸಾರ ಆಕ್ಷೇಪಣೆಕಾರನು ಮತ್ತು ಅದಕ್ಕೆ ಆಕ್ಷೇಪಿತ ವ್ಯಕ್ತಿಯ ಮತ್ತು ನೋಂದಣಿ ಅಧಿಕಾರಿಯ ಅಭಿಪ್ರಾಯದಲ್ಲಿ ತನಗೆ ನೆರವಾಗುವ ಸಂಭವವಿರುವ ಇತರ ಯಾರೇ ವ್ಯಕ್ತಿಯು, ಹಾಜರಾಗಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಪರಶೀಲನೆ ನಡೆಸತಕ್ಕದ್ದು.

(3) ನೋಂದಣಿ ಅಧಿಕಾರಿಯು, ತನ್ನ ವಿವೇಚನಾನುಸಾರವಾಗಿ,-

(ಎ) ಯಾರೇ ಕ್ಲೇಮುದಾರನು, ಆಕ್ಷೇಪಣೆಕಾರ, ಅಥವಾ ಅದರ ಆಕ್ಷೇಪಿತ ವ್ಯಕ್ತಿ, ತನ್ನ ಮುಂದೆ ಖುದ್ದಾಗಿ ಹಾಜರಾಗುವಂತೆ ಅಗತ್ಯಪಡಿಸಬಹುದು; ಮತ್ತು

(ಬಿ) ಯಾರೇ ವ್ಯಕ್ತಿಯು ನೀಡುವ ಆ ಸಾಕ್ಷ್ಯವನ್ನು, ಪ್ರಮಾಣ ವಚನದಲ್ಲಿ ನೀಡಬಹುದು ಮತ್ತು ಆ ಉದ್ದೇಶಕ್ಕಾಗಿ ಪ್ರಮಾಣ ಮಾಡಿಸಬಹುದು.

**19. ಅಜಾಗರೂಕತೆಯಿಂದ ಬಿಟ್ಟುಬಿಡಲಾದ ಹೆಸರುಗಳ ಸೇರ್ಪಡೆ.**- ನೋಂದಣಿ ಅಧಿಕಾರಿಗೆ ಸಿದ್ಧತೆ ಅವಧಿಯಲ್ಲಿ ಆದ ಅಜಾಗರೂಕತೆ ಅಥವಾ ತಪ್ಪಿನ ಕಾರಣದಿಂದಾಗಿ, ಯಾರೇ ಮತದಾರರ ಹೆಸರುಗಳು ಮತದಾರರ ಪಟ್ಟಿಯಿಂದ ಬಿಟ್ಟುಹೋಗಿವೆ ಎಂದು ಮತ್ತು ಈ ನಿಯಮದ ಮೇರೆಗೆ ಪರಿಹಾರಾತ್ಮಕ ಕ್ರಮವನ್ನು ಕೈಗೊಳ್ಳಬೇಕೆಂದು ಕಂಡುಬಂದರೆ, ನೋಂದಣಿ ಅಧಿಕಾರಿಯು,-

(ಎ) ಅಂಥ ಮತದಾರರ ಹೆಸರುಗಳ ಪಟ್ಟಿ ಮತ್ತು ಇತರ ವಿವರಗಳನ್ನು ಸಿದ್ಧಪಡಿಸತಕ್ಕದ್ದು;

(ಬಿ) ಮತದಾರರ ಪಟ್ಟಿಯಲ್ಲಿ ಈ ಹೆಸರುಗಳನ್ನು ಸೇರಿಸಲು ಪರಿಗಣಿಸಲಾಗಿರುವ ಸಮಯ ಮತ್ತು ಸ್ಥಳಕ್ಕೆ ಸಂಬಂಧಿಸಿದ ಬಗ್ಗೆ ನೋಟೀಸಿನೊಟ್ಟಿಗೆ ಪಟ್ಟಿಯ ಪ್ರತಿಯನ್ನು ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂಥ ಇತರ ರೀತಿಯಲ್ಲಿ ಪಟ್ಟಿಯನ್ನು ಮತ್ತು ನೋಟೀಸನ್ನು ಸಹ ಪ್ರಕಟಿಸತಕ್ಕದ್ದು; ಮತ್ತು

(ಸಿ) ಸಲ್ಲಿಸಬಹುದಾದ ಯಾವುದೇ ಮೌಖಿಕ ಅಥವಾ ಲಿಖಿತ ಆಕ್ಷೇಪಣೆಗಳನ್ನು ಪರಿಗಣಿಸಿದ ನಂತರ, ಎಲ್ಲಾ ಆಥವಾ ಯಾವ ಹೆಸರುಗಳನ್ನು ಮತದಾರರ ಪಟ್ಟಿಯಲ್ಲಿ ಸೇರಿಸಬೇಕು ಎಂಬುದನ್ನು ನಿರ್ಧರಿಸತಕ್ಕದ್ದು.

**20. ಹೆಸರುಗಳನ್ನು ತೆಗೆದುಹಾಕುವುದು,**- ನೋಂದಣಿ ಅಧಿಕಾರಿಗೆ ಮತದಾರರ ಪಟ್ಟಿಯನ್ನು ಅಂತಿಮವಾಗಿ ಪ್ರಕಟಿಸುವ ಮೊದಲು ಯಾವುದೇ ಸಮಯದಲ್ಲಿ ಅಜಾಗರೂಕತೆ ಅಥವಾ ಲೋಪದೋಷ ಅಥವಾ ಅನ್ಯಥಾ ಕಾರಣದಿಂದಾಗಿ, ಮೃತ ವ್ಯಕ್ತಿಗಳ ಅಥವಾ ವಾರ್ಡಿನಲ್ಲಿ ಸಾಮಾನ್ಯವಾಗಿ ನಿವಾಸಿಗಳಾಗಿರುವುದು ನಿಂತುಹೋದಾಗ ಅಥವಾ ಸಾಮಾನ್ಯವಾಗಿ ನಿವಾಸಿಗಳಾಗಿರದ ವ್ಯಕ್ತಿಗಳ ಅಥವಾ ಆ ಮತದಾರರ ಪಟ್ಟಿಯಲ್ಲಿ ಅನ್ಯಥಾ ನೋಂದಾಯಿಸಲು ಹಕ್ಕುಳ್ಳದಿರುವ ವ್ಯಕ್ತಿಗಳ ಹೆಸರುಗಳನ್ನು ಚುನಾವಣಾ ಪಟ್ಟಿಯಲ್ಲಿ ಸೇರಿಸಲಾಗಿದೆಯೆಂದು ಮತ್ತು ಈ ನಿಯಮದ ಮೇರೆಗೆ ಪರಿಹಾರ ಕ್ರಮವನ್ನು ಕೈಗೊಳ್ಳಲಾಗಿದೆಯೆಂದು ಕಂಡುಬಂದರೆ, ನೋಂದಣಿ ಅಧಿಕಾರಿಯು,-

(ಎ) ಅಂಥ ಮತದಾರರ ಹೆಸರುಗಳ ಪಟ್ಟಿಯನ್ನು ಮತ್ತು ಇತರ ವಿವರಗಳನ್ನು ಸಿದ್ಧಪಡಿಸತಕ್ಕದ್ದು;

(ಬಿ) ಮತದಾರರ ಪಟ್ಟಿಯಿಂದ ಈ ಹೆಸರುಗಳನ್ನು ತೆಗೆದುಹಾಕುವ ಪ್ರಶ್ನೆಯನ್ನು ಪರಿಗಣಿಸಲಾಗಿರುವ ಸಮಯ ಮತ್ತು ಸ್ಥಳಕ್ಕೆ ಸಂಬಂಧಿಸಿದ ನೋಟೀಸಿನೊಂದಿಗೆ ಪಟ್ಟಿಯ ಪ್ರತಿಯನ್ನು ಅವರ ಕಚೇರಿಯ ಸೂಚನಾ ಫಲಕದ ಮೇಲೆ ಪ್ರದರ್ಶಿಸತಕ್ಕದ್ದು ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂಥ ಇತರ ರೀತಿಯಲ್ಲಿ ಪಟ್ಟಿಯನ್ನು ಮತ್ತು ನೋಟೀಸನ್ನು ಸಹ ಪ್ರಕಟಿಸತಕ್ಕದ್ದು; ಮತ್ತು

(ಸಿ) ಸಲ್ಲಿಸಬಹುದಾದ ಯಾವುದೇ ಮೌಖಿಕ ಅಥವಾ ಲಿಖಿತ ಆಕ್ಷೇಪಣೆಗಳನ್ನು ಪರಿಗಣಿಸಿದ ತರುವಾಯ, ಎಲ್ಲಾ ಆಥವಾ ಯಾವುದೇ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕತಕ್ಕದ್ದು:

ಪರಂತು, ವಾರ್ಡಿನಲ್ಲಿ ಸಾಮಾನ್ಯವಾಗಿ ನಿವಾಸಿಯಾಗಿರುವುದು ನಿಂತು ಹೋಗಿದೆ ಅಥವಾ ಸಾಮಾನ್ಯವಾಗಿ ನಿವಾಸಿಯಾಗಿಲ್ಲ ಎಂಬ ಕಾರಣದ ಮೇಲೆ ಅಥವಾ ಅನ್ಯಥಾ ಆ ಮತದಾರರ ಪಟ್ಟಿಯಲ್ಲಿ ನೋಂದಾಯಿಸಲು ಹಕ್ಕುಳ್ಳದಿರುವ ಯಾರೇ ವ್ಯಕ್ತಿಗೆ ಸಂಬಂಧಪಟ್ಟಂತೆ ಈ ನಿಯಮದ ಮೇರೆಗೆ ಯಾವುದೇ ಕ್ರಮವನ್ನು ಕೈಗೊಳ್ಳುವ ಮುಂಚೆ, ನೋಂದಣಿ ಅಧಿಕಾರಿಯು, ಆತನ ಸಂಬಂಧದಲ್ಲಿ ಏಕೆ ಪ್ರಸ್ತಾವಿತ ಕ್ರಮವನ್ನು ಕೈಗೊಳ್ಳಬಾರದು ಎಂಬುದರ ಬಗ್ಗೆ ಕಾರಣ ಕೇಳಲು ಯುಕ್ತ ಅವಕಾಶವನ್ನು ಆತನಿಗೆ ನೀಡುವ ಪ್ರತಿಯೊಂದೂ ಪ್ರಯತ್ನವನ್ನು ಮಾಡತಕ್ಕದ್ದು.

**21. ಮತದಾರರ ಪಟ್ಟಿಯ ಅಂತಿಮ ಪ್ರಕಟಣೆ.-**

(1) ನೋಂದಣಿ ಅಧಿಕಾರಿಯು,-

(ಎ) ನಿಯಮಗಳು 16,18,19 ಮತ್ತು 20ರ ಅಡಿಯಲ್ಲಿ ತನ್ನ ತೀರ್ಮಾನಗಳನ್ನು ಕಾರ್ಯಗತಗೊಳಿಸುವ ತಿದ್ದುಪಡಿಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಮತದಾರರ ಪಟ್ಟಿಯಲ್ಲಿ ಆನಂತರ ಕಂಡುಬಂದ ಯಾವುದೇ ಲಿಪಿಕ ಅಥವಾ ಮುದ್ರಣ ದೋಷಗಳು ಅಥವಾ ಇತರ ತಪ್ಪುಗಳನ್ನು ಸರಿಪಡಿಸತಕ್ಕದ್ದು;

(ಬಿ) ಮತದಾರರ ಪಟ್ಟಿಯನ್ನು ಅದರ ಸಂಪೂರ್ಣ ಪ್ರತಿಯನ್ನು ಪರಿಶೀಲನೆಗೆ ಲಭ್ಯವಾಗುವಂತೆ ಮಾಡುವ ಮೂಲಕ ತಿದ್ದುಪಡಿಗಳ ಪಟ್ಟಿಯೊಂದಿಗೆ ಪ್ರಕಟಿಸತಕ್ಕದ್ದು ಮತ್ತು ಅವರ ಕಚೇರಿಯಲ್ಲಿ ನಮೂನೆ 16 ರಲ್ಲಿ ನೋಟೀಸನ್ನು ಪ್ರದರ್ಶಿಸತಕ್ಕದ್ದು; ಮತ್ತು

(ಸಿ) ರಾಜ್ಯ ಚುನಾವಣಾ ಆಯೋಗವು ನೀಡಬಹುದಾದಂಥ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳಿಗೆ ಒಳಪಟ್ಟು, ನೋಂದಾಯಿತ, ಮಾನ್ಯತೆ ಪಡೆದ ರಾಷ್ಟ್ರೀಯ ರಾಜಕೀಯ ಪಕ್ಷಗಳು ಮತ್ತು ಕರ್ನಾಟಕ ರಾಜ್ಯದಲ್ಲಿನ ರಾಜ್ಯ ನೋಂದಾಯಿತ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ತಿದ್ದುಪಡಿಗಳ ಪಟ್ಟಿ, ಯಾವುವಾದರೂ ಇದ್ದರೆ, ಅದರೊಂದಿಗೆ ಅಂತಿಮವಾಗಿ ಪ್ರಕಟಿಸಲಾದಂಥ ಮತದಾರರ ಪಟ್ಟಿಯ ಎರಡು ಪ್ರತಿಗಳನ್ನು ಉಚಿತವಾಗಿ ಒದಗಿಸತಕ್ಕದ್ದು.

(2) ಅಂಥ ಪ್ರಕಟಣೆಯಾದ ನಂತರ, ತಿದ್ದುಪಡಿಗಳ ಪಟ್ಟಿಯೊಂದಿಗಿನ ಮತದಾರರ ಪಟ್ಟಿಯು ಆ ವಾರ್ಡಿನ ಮತದಾರರ ಪಟ್ಟಿಯಾಗಿರತಕ್ಕದ್ದು.

(3) ಮತದಾರರ ಪಟ್ಟಿಯು (ಈ ಉಪ-ನಿಯಮದಲ್ಲಿ ಇನ್ನು ಮುಂದೆ ಮೂಲ ಪಟ್ಟಿ ಎಂದು ಉಲ್ಲೇಖಿಸಲಾಗಿದೆ) ತಿದ್ದುಪಡಿಗಳ ಪಟ್ಟಿಯೊಂದಿಗೆ, ಉಪ-ನಿಯಮ (2) ರ ಅಡಿಯಲ್ಲಿ ಒಂದು ವಾರ್ಡ್‌ಗಾಗಿ ಮತದಾರರ ಪಟ್ಟಿಯಾದಾಗ ನೋಂದಣಿ ಅಧಿಕಾರಿಯು ಸಂಬಂಧಪಟ್ಟ ಎಲ್ಲರ ಅನುಕೂಲಕ್ಕಾಗಿ, ರಾಜ್ಯ ಚುನಾವಣಾ ಆಯೋಗವು ಈ ಬಗ್ಗೆ ಹೊರಡಿಸಿದ ಯಾವುದೇ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳಿಗೆ ಒಳಪಟ್ಟು, ಮೂಲ ಪಟ್ಟಿಯಲ್ಲಿಯೇ ಸಂಬಂಧಪಟ್ಟ ಭಾಗಗಳಲ್ಲಿ ಹೆಸರುಗಳನ್ನು ಸೇರಿಸುವುದು, ತಿದ್ದುಪಡಿಗಳು, ಬದಲಾವಣೆ ಅಥವಾ ನಮೂದುಗಳನ್ನು ಅಳಿಸಿ ಹಾಕಿರುವುದನ್ನು ಜತೆಗೆ ಸೇರಿಸುವ ಮೂಲಕ ಪಟ್ಟಿಯನ್ನು ಮೂಲ ಪಟ್ಟಿಯಲ್ಲಿ ಸಂಯೋಜಿಸಬಹುದು ಆದಾಗ್ಯೂ, ಅಂಥ ಸಂಯೋಜನೆಯ ಯಾರೇ ಮತದಾರರ ಹೆಸರಿನಲ್ಲಿ ಅಥವಾ ತಿದ್ದುಪಡಿಗಳ ಪಟ್ಟಿಯಲ್ಲಿ ನೀಡಲಾದ ಯಾರೇ ಮತದಾರರಿಗೆ ಸಂಬಂಧಿಸಿದ ಯಾವುದೇ ವಿವರಗಳಲ್ಲಿನ ಅಂಥ ಸಂಯೋಜನೆಯ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಯನ್ನು ಮಾಡತಕ್ಕದ್ದಲ್ಲ.

(4) ಪಾಲಿಕೆಗಳಿಗೆ ಸಂಬಂಧಿಸಿದ ಅಂಥ ವಾರ್ಡ್‌ಗಳ ಮತದಾರರ ಪಟ್ಟಿಗೆ ಅಂಥ ವಾರ್ಡ್‌ಗಾಗಿ ಚುನಾವಣೆಗೆ ನಾಮನಿರ್ದೇಶನ ಮಾಡಿಕೊಳ್ಳುವುದಕ್ಕೆ ಕೊನೆಯ ದಿನಾಂಕವಾದ ತರುವಾಯ ಮತ್ತು ಅಂಥ ಚುನಾವಣೆಯ ಮುಕ್ತಾಯಗೊಳ್ಳುವ ಮೊದಲು ಯಾವುದೇ ತಿದ್ದುಪಡಿ, ಬದಲಾವಣೆ, ಸೇರ್ಪಡೆ ಅಥವಾ ನಮೂದನ್ನು ತೆಗೆದುಹಾಕಿರುವುದನ್ನು ಸೇರಿಸತಕ್ಕದ್ದಲ್ಲ.

**22. ಕ್ಲೇಮುಗಳು ಮತ್ತು ಆಕ್ಷೇಪಣೆಗಳನ್ನು ನಿರ್ಧರಿಸುವ ಆದೇಶಗಳಿಂದ ಅಪೀಲುಗಳು.-**

(1) ನೋಂದಣಿ ಅಧಿಕಾರಿಯ ಯಾವುದೇ ತೀರ್ಮಾನದಿಂದ ನಿಯಮ 18,19 ಅಥವಾ 20ರ ಮೇರೆಗೆ ಚುನಾವಣಾ ಆಯೋಗವು ಈ ಬಗ್ಗೆ ಗೊತ್ತುಪಡಿಸಬಹುದಾದಂತೆ ನಿಯೋಜಿಸಲಾದ ರಾಜ್ಯ ಸರ್ಕಾರಿ ಅಧಿಕಾರಿಗೆ (ಇಲ್ಲಿ ಇನ್ನು ಮುಂದೆ ಅಪೀಲು ಅಧಿಕಾರಿ ಎಂದು ಉಲ್ಲೇಖಿಸಲಾಗಿದೆ) ಅಪೀಲನ್ನು ಸಲ್ಲಿಸಬಹುದು:

ಪರಂತು, ಅಪೀಲನ್ನು ಸಲ್ಲಿಸಲು ಬಯಸುವ ವ್ಯಕ್ತಿಯು ಅಪೀಲಿನ ವಸ್ತು ವಿಷಯವಾಗಿರುವ ವಿಷಯದ ಬಗ್ಗೆ ನೋಂದಣಿ ಅಧಿಕಾರಿಯ ವಿಚಾರಣೆಗೆ ಒಳಗಾಗುವ ಅಥವಾ ಅಧಿಕಾರಿಗೆ ಮನವಿಗಳನ್ನು ಸಲ್ಲಿಸುವ ಹಕ್ಕನ್ನು ಆತನು ಹೊಂದಿರದಿದ್ದಲ್ಲಿ ಅಪೀಲನ್ನು ಸಲ್ಲಿಸತಕ್ಕದ್ದಲ್ಲ.

(2) ಉಪ-ನಿಯಮ (1) ರ ಅಡಿಯಲ್ಲಿನ ಪ್ರತಿಯೊಂದು ಅಪೀಲು,-

(ಎ) ಅಪೀಲುದಾರರು ಸಹಿ ಮಾಡಿದ ಜ್ಞಾಪನ ಪತ್ರದ ನಮೂನೆಯಲ್ಲಿ ಮತ್ತು ಅಪೀಲಿನ ವಿರುದ್ಧ ಮಾಡಲಾದ ಆದೇಶದ ಪ್ರತಿಯು ಇರತಕ್ಕದ್ದು; ಮತ್ತು

(ಬಿ) ತೀರ್ಮಾನವನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಅಪೀಲು ಅಧಿಕಾರಿಗೆ ಸಲ್ಲಿಸತಕ್ಕದ್ದು ಅಥವಾ ಆ ಅವಧಿಯೊಳಗೆ ಅವರಿಗೆ ತಲುಪಿಸುವ ಸಲುವಾಗಿ ನೋಂದಾಯಿತ ಅಂಚೆ ಮೂಲಕ ಆ ಅಧಿಕಾರಿಗೆ ಕಳುಹಿಸತಕ್ಕದ್ದು.

(3) ಈ ನಿಯಮದ ಅಡಿಯಲ್ಲಿ ಅಪೀಲು ಸಲ್ಲಿಸುವುದಕ್ಕೆ, ನಿಯಮ 21 ರ ಅಡಿಯಲ್ಲಿ ನೋಂದಣಿ ಅಧಿಕಾರಿಯು ತೆಗೆದುಕೊಳ್ಳಬೇಕಾದ ಯಾವುದೇ ಕ್ರಮಕ್ಕೆ ತಡೆ ನೀಡುವುದು ಅಥವಾ ಮುಂದೂಡುವುದು ಪರಿಣಾಮಕಾರಿಯಾಗತಕ್ಕದ್ದಲ್ಲ.

(4) ಅಪೀಲು ಅಧಿಕಾರಿಯ ಪ್ರತಿಯೊಂದು ನಿರ್ಧಾರವು ಅಂತಿಮವಾಗಿರತಕ್ಕದ್ದು, ಆದರೆ ಅದು ನೋಂದಣಿ ಅಧಿಕಾರಿಯ ನಿರ್ಧಾರವನ್ನು ವಿಪರ್ಯಯಗೊಳಿಸುವಷ್ಟರ ಮಟ್ಟಿಗೆ ಅಥವಾ ಮಾರ್ಪಡಿಸುವಷ್ಟರ ಮಟ್ಟಿಗೆ ಅಪೀಲಿನಲ್ಲಿ ನಿರ್ಧರಿಸಿದ ದಿನಾಂಕದಿಂದ ಮಾತ್ರ ಜಾರಿಗೆ ಬರತಕ್ಕದ್ದು.

(5) ಈ ನಿಯಮದ ಅಡಿಯಲ್ಲಿ ಅಪೀಲು ಅಧಿಕಾರಿಯ ನಿರ್ಧಾರಗಳನ್ನು ಜಾರಿಗೆ ತರಲು ಅವಶ್ಯಕವಾಗಬಹುದಾದಂಥ ತಿದ್ದುಪಡಿಗಳನ್ನು ನೋಂದಣಿ ಅಧಿಕಾರಿಯು ಪಟ್ಟಿಯಲ್ಲಿ ಮಾಡಿಸತಕ್ಕದ್ದು.

**23. ಪಟ್ಟಿಗಳ ಪರಿಷ್ಕರಣೆ.-**

(1) ಪ್ರತಿಯೊಂದು ವಾರ್ಡಿನ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂತೆ, 35ನೇ ಪ್ರಕರಣದ ಮೇರೆಗೆ ಸಮಗ್ರವಾಗಿ ಅಥವಾ ಸಂಕ್ಷಿಪ್ತವಾಗಿಯಾಗಲಿ ಅಥವಾ ಭಾಗಶಃ ಸಮಗ್ರವಾಗಿ ಮತ್ತು ಭಾಗಶಃ ಸಂಕ್ಷಿಪ್ತವಾಗಿಯಾಗಲಿ ಪರಿಷ್ಕರಿಸತಕ್ಕದ್ದು.

(2) ಪಟ್ಟಿ ಅಥವಾ ಅದರ ಯಾವುದೇ ಭಾಗವನ್ನು ಯಾವುದೇ ವರ್ಷದಲ್ಲಿ ಸಾಂದ್ರವಾಗಿ ಪರಿಷ್ಕರಿಸಬೇಕಾದಲ್ಲಿ, ಅದನ್ನು ಹೊಸದಾಗಿ ಸಿದ್ಧಪಡಿಸತಕ್ಕದ್ದು ಮತ್ತು 3 ರಿಂದ 22ನೇ ನಿಯಮಗಳ

ಉಪಬಂಧಗಳು, ಮತದಾರರ ಪಟ್ಟಿಯ ಮೊದಲ ತಯಾರಿಕೆಗೆ ಸಂಬಂಧದಲ್ಲಿ ಅವು ಅನ್ವಯವಾಗುವಂತೆಯೇ ಅಂಥ ಪರಿಷ್ಕರಣೆ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು.

(3) ಮತದಾರರ ಪಟ್ಟಿ ಅಥವಾ ಅದರ ಯಾವುದೇ ಭಾಗವನ್ನು ಯಾವುದೇ ವರ್ಷದಲ್ಲಿ ಸಂಕ್ಷಿಪ್ತವಾಗಿ ಪರಿಷ್ಕರಿಸಬೇಕಾದಾಗ, ನೋಂದಣಿ ಅಧಿಕಾರಿಯು ಸುಲಭವಾಗಿ ಲಭ್ಯವಿರಬಹುದಾದಂಥ ಮಾಹಿತಿಯ ಆಧಾರದ ಮೇಲೆ ಮತದಾರರ ಪಟ್ಟಿಯ ಸಂಬಂಧಪಟ್ಟ ಭಾಗಗಳಿಗೆ ತಿದ್ದುಪಡಿಗಳ ಪಟ್ಟಿಯನ್ನು ಸಿದ್ಧಪಡಿಸಬೇಕು ಮತ್ತು ಕರಡಿನಲ್ಲಿರುವ ತಿದ್ದುಪಡಿಗಳ ಪಟ್ಟಿಯೊಂದಿಗೆ ಪಟ್ಟಿಯನ್ನು ಪ್ರಕಟಿಸತಕ್ಕದ್ದು; ಮತ್ತು 7 ರಿಂದ 22 ನೇ ನಿಯಮಗಳ ಉಪಬಂಧಗಳು ಮತದಾರರ ಪಟ್ಟಿಯ ಮೊದಲು ಸಿದ್ಧಪಡಿಸುವುದಕ್ಕೆ ಸಂಬಂಧಿಸಿದಂತೆ ಅವು ಅನ್ವಯವಾಗುವಂತೆ ಪರಿಷ್ಕರಣೆಗೆ ಸಂಬಂಧಿಸಿದಂತೆ ಅನ್ವಯಿಸತಕ್ಕದ್ದು.

(4) ಉಪ-ನಿಯಮ (2)ರ ಅಡಿಯಲ್ಲಿ ಪರಿಷ್ಕೃತ ಪಟ್ಟಿಯ ಕರಡು ಪ್ರಕಟಣೆ ಅಥವಾ (3)ನೇ ಉಪ-ನಿಯಮದ ಅಡಿಯಲ್ಲಿನ ತಿದ್ದುಪಡಿಗಳ ಪಟ್ಟಿ ಮತ್ತು 21ನೇ ನಿಯಮದ ಮೇರೆಗೆ ಅದರ ಅಂತಿಮ ಪ್ರಕಟಣೆಯ ನಡುವಿನ, ಯಾವುದೇ ಸಮಯದಲ್ಲಿ, ಅಧಿನಿಯಮದ 35ನೇ ಪ್ರಕರಣದ ಮೇರೆಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಪಟ್ಟಿಯಲ್ಲಿ ಯಾವುದೇ ಹೆಸರುಗಳನ್ನು ಸೇರಿಸಲು ನಿರ್ದೇಶಿಸಲಾಗಿದ್ದರೆ, ನೋಂದಣಿ ಅಧಿಕಾರಿಯು, ತನ್ನ ಅಭಿಪ್ರಾಯದಲ್ಲಿ ಅಂತಹ ಸೇರ್ಪಡೆಗೆ ಯಾವುದೇ ಸಿಂಧುವಾದ ಆಕ್ಷೇಪಣೆ ಇದ್ದ ಹೊರತು, ಆ ಹೆಸರುಗಳನ್ನು ಪರಿಷ್ಕೃತ ಪಟ್ಟಿಯಲ್ಲೂ ಸೇರಿಸತಕ್ಕದ್ದು.

**24. ಮತದಾರರ ಪಟ್ಟಿಗಳಲ್ಲಿ ನಮೂದುಗಳನ್ನು ತಿದ್ದುಪಡಿ ಮಾಡುವುದು ಮತ್ತು ಹೆಸರುಗಳನ್ನು ಸೇರಿಸುವುದು.-** (1) ಪ್ರತಿಯೊಂದು ಅರ್ಜಿಯನ್ನು ಸೂಕ್ತವಾದ ನಮೂನೆ ಸಂಖ್ಯೆ 4 (ಹೆಸರನ್ನು ಸೇರಿಸುವುದು), ನಮೂನೆ ಸಂಖ್ಯೆ 6 (ನಮೂದಿನಲ್ಲಿನ ವಿವರಗಳಿಗೆ ಆಕ್ಷೇಪಣೆ), ನಮೂನೆ ಸಂಖ್ಯೆ 7 (ನಮೂದಿನ ವರ್ಗಾವಣೆ) ಮತ್ತು ನಮೂನೆ ಸಂಖ್ಯೆ 8 (ನಮೂದನ್ನು ಅಳಿಸಿಹಾಕುವುದು)ರಲ್ಲಿ ನಕಲು ಪ್ರತಿಯಲ್ಲಿ ಸಲ್ಲಿಸತಕ್ಕದ್ದು.

(2) (1)ನೇ ಉಪ-ನಿಯಮದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಅರ್ಜಿಯನ್ನು ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ನೋಂದಣಿ ಅಧಿಕಾರಿಗೆ ಸಲ್ಲಿಸತಕ್ಕದ್ದು.

(3) (2)ನೇ ಉಪ-ನಿಯಮಕ್ಕೆ ಅನುಸಾರವಾಗಿ ಸೇರ್ಪಡೆಗಾಗಿ ಸಲ್ಲಿಸಲಾದ ಪ್ರತಿಯೊಂದು ಅರ್ಜಿಯಲ್ಲಿ ಕ್ಲೇಮುದಾರನು ತನ್ನ ಹೆಸರನ್ನು ಸೇರಿಸಬೇಕೆಂದು ಬಯಸುವ ಮತದಾರರ ಪಟ್ಟಿಯಲ್ಲಿ ಈಗಾಗಲೇ ಹೆಸರು ಸೇರ್ಪಡೆಯಾಗಿರುವ ಇನ್ನೊಬ್ಬ ವ್ಯಕ್ತಿಯು ಅಗತ್ಯವಿದ್ದಲ್ಲಿ ಮೇಲುರುಜು ಮಾಡತಕ್ಕದ್ದು.

(4) (1) ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದ ಶುಲ್ಕವನ್ನು ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಸಂದಾಯ ಮಾಡತಕ್ಕದ್ದು.

(5) ನೋಂದಣಿ ಅಧಿಕಾರಿಯು, ಅಂಥ ಅರ್ಜಿಯನ್ನು ಸ್ವೀಕರಿಸಿದ ಕೂಡಲೇ, ಅಂಥ ಪ್ರಕಟಣೆಯಾದ ದಿನಾಂಕದಿಂದ ಏಳು ದಿನಗಳ ಅವಧಿಯೊಳಗೆ ಅಂಥ ಅರ್ಜಿಗೆ ಆಕ್ಷೇಪಣೆಯನ್ನು ಆಹ್ವಾನಿಸುವ ಸೂಚನೆಯೊಂದಿಗೆ ಅದರ ಒಂದು ಪ್ರತಿಯನ್ನು ತಮ್ಮ ಕಚೇರಿಯಲ್ಲಿನ ಕೆಲವು ಎದ್ದುಕಾಣುವ ಸ್ಥಳದಲ್ಲಿ ಪ್ರದರ್ಶಿಸುವಂತೆ ನಿರ್ದೇಶಿಸತಕ್ಕದ್ದು.

(6) ನೋಂದಣಿ ಅಧಿಕಾರಿಯು, (3)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದ ಅವಧಿ ಮುಗಿದ ನಂತರ, ಸಾಧ್ಯವಾದಷ್ಟು ಬೇಗನೇ, ತನಗೆ ಬಂದ ಅರ್ಜಿ ಮತ್ತು ಅದಕ್ಕೆ ಸಂಬಂಧಿಸಿದಂತೆ ಸ್ವೀಕರಿಸಿದ ಆಕ್ಷೇಪಣೆಗಳು ಯಾವುವಾದರೂ ಇದ್ದರೆ, ಅವುಗಳನ್ನು ಪರಿಗಣಿಸತಕ್ಕದ್ದು ಮತ್ತು

ಮನವರಿಕೆಯಾದರೆ, ಅಗತ್ಯವಿರಬಹುದಾಂತೆ ಮತದಾರರ ಪಟ್ಟಿಯಲ್ಲಿ ನಮೂದುಗಳ ಸೇರ್ಪಡೆ, ಬಿಟ್ಟುಬಿಡುವಿಕೆ, ತಿದ್ದುಪಡಿ ಅಥವಾ ಬದಲಾವಣೆಗೆ ನಿರ್ದೇಶಿಸತಕ್ಕದ್ದು.

ಪರಂತು, ನೋಂದಣಿ ಅಧಿಕಾರಿಯು, ಅರ್ಜಿಯನ್ನು ತಿರಸ್ಕರಿಸಿದಾಗ, ಅವರು ಅಂಥ ನಿರಾಕರಣೆಗಳಿಗೆ ಅವರ ಕಾರಣಗಳ ಸಂಕ್ಷಿಪ್ತ ಹೇಳಿಕೆಯನ್ನು ಲಿಖಿತವಾಗಿ ದಾಖಲಿಸತಕ್ಕದ್ದು.

**25. ಆದೇಶಗಳಿಂದಾಗಿ ಅಪೀಲುಗಳು.-**

(1) ಪ್ರತಿಯೊಂದು ಅಪೀಲು,

(ಎ) ಅಪೀಲುದಾರನು ಸಹಿ ಮಾಡಿದ ಜ್ಞಾಪನ ಪತ್ರದ ನಮೂನೆಯಲ್ಲಿರತಕ್ಕದ್ದು;

(ಬಿ) ಅಪೀಲಿನ ವಿರುದ್ಧ ಮಾಡಲಾದ ಆದೇಶದ ಪ್ರತಿಯೊಂದಿಗಿರತಕ್ಕದ್ದು; ಮತ್ತು

(ಸಿ) ಅಪೀಲಿನ ವಿರುದ್ಧ ಮಾಡಲಾದ ಆದೇಶದ ದಿನಾಂಕದಿಂದ ಹದಿನೈದು ದಿನಗಳ ಅವಧಿಯೊಳಗೆ ಜಿಲ್ಲಾ ಚುನಾವಣಾಧಿಕಾರಿಗೆ ಸಲ್ಲಿಸತಕ್ಕದ್ದು ಅಥವಾ ಆ ಅವಧಿಯೊಳಗೆ ಅವರಿಗೆ ತಲುಪಿಸುವ ಸಲುವಾಗಿ ನೋಂದಾಯಿತ ಅಂಚೆ ಮೂಲಕ ಕಳುಹಿಸತಕ್ಕದ್ದು;

ಪರಂತು, ಅಪೀಲುದಾರನು ನಿರ್ದಿಷ್ಟಪಡಿಸಲಾದ ಸಮಯದೊಳಗೆ ಅದನ್ನು ಸಲ್ಲಿಸದಿರುವುದಕ್ಕೆ ಸಾಕಷ್ಟು ಕಾರಣವಿದೆ ಎಂದು ಮನದಟ್ಟಾದರೆ, ಜಿಲ್ಲಾ ಚುನಾವಣಾ ಅಧಿಕಾರಿಯು ತನಗೆ ಅಪೀಲು ಸಲ್ಲಿಸುವಲ್ಲಿ ಆದ ವಿಳಂಬವನ್ನು ಮನ್ನಾ ಮಾಡಬಹುದು.

(2) (1)ನೇ ಉಪ-ನಿಯಮದ, ಉದ್ದೇಶಕ್ಕಾಗಿ ಸ್ವತಃ ಅಪೀಲುದಾರನು ಅಥವಾ ಅವನ ಪರವಾಗಿ ಜಿಲ್ಲಾ ಚುನಾವಣಾಧಿಕಾರಿಗೆ ಅಪೀಲಿನ ಜ್ಞಾಪನ ಪತ್ರವನ್ನು ಸಲ್ಲಿಸಿದಾಗ, ಜಿಲ್ಲಾ ಚುನಾವಣಾಧಿಕಾರಿಗೆ ಅಪೀಲನ್ನು ಸಲ್ಲಿಸಲಾಗಿದೆ ಎಂದು ಭಾವಿಸತಕ್ಕದ್ದು.

**26. ಅಧಿಸೂಚಿತ ಚುನಾವಣಾ ಕ್ಷೇತ್ರಗಳಲ್ಲಿನ ಮತದಾರರಿಗೆ ಗುರುತಿನ ಚೀಟಿಗಳು.-**

(1) ರಾಜ್ಯ ಚುನಾವಣಾ ಆಯೋಗವು, ಮತದಾರರನ್ನು ವಂಚಿಸುವುದನ್ನು ತಡೆಗಟ್ಟುವ ಮತ್ತು ಮತದಾನದ ಸಮಯದಲ್ಲಿ ಅವರನ್ನು ಗುರುತಿಸುವುದನ್ನು ಸುಗಮಗೊಳಿಸುವ ಕಾರಣದಿಂದ, ರಾಜ್ಯದ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ನಿಯಮದ ಉಪಬಂಧಗಳು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ವಾರ್ಡ್ ಅಥವಾ ಅದರ ಭಾಗಕ್ಕೆ ಅನ್ವಯಿಸುತ್ತವೆ ಎಂದು ನಿರ್ದೇಶಿಸಬಹುದು.

(2) (1)ನೇ ಉಪ-ನಿಯಮದ ಅಡಿಯಲ್ಲಿ ಅಧಿಸೂಚನೆ ಹೊರಡಿಸಿದ ನಂತರ, ಸಾಧ್ಯವಾದಷ್ಟು ಬೇಗನೆ ಅಂಥ ಅಧಿಸೂಚಿತ ವಾರ್ಡ್‌ನ ನೋಂದಣಿ ಅಧಿಕಾರಿಯು, ಈ ನಿಯಮದ ಉಪಬಂಧಗಳಿಗೆ ಅನುಸಾರವಾಗಿ ಸಿದ್ಧಪಡಿಸಲಾದ ಗುರುತಿನ ಚೀಟಿಯನ್ನು ಪ್ರತಿಯೊಬ್ಬ ಮತದಾರರಿಗೂ ವಿತರಿಸಲು ವ್ಯವಸ್ಥೆ ಮಾಡತಕ್ಕದ್ದು.

(3) ಗುರುತಿನ ಚೀಟಿಯನ್ನು.-

(ಎ) ದ್ವಿಪ್ರತಿಯಲ್ಲಿ ಸಿದ್ಧಪಡಿಸತಕ್ಕದ್ದು;

(ಬಿ) ರಾಜ್ಯ ಚುನಾವಣಾ ಆಯೋಗವು ನಿರ್ದಿಷ್ಟಪಡಿಸಬಹುದಾದ ಮತದಾರರ ಹೆಸರು, ವಯಸ್ಸು, ವಾಸಸ್ಥಳ ಮತ್ತು ಅಂಥ ಇತರ ವಿವರಗಳನ್ನು ಒಳಗೊಂಡಿರತಕ್ಕದ್ದು;

(ಸಿ) ಸರ್ಕಾರದ ವೆಚ್ಚದಲ್ಲಿ ತೆಗೆದುಕೊಂಡ ಮತದಾರನ ಭಾವಚಿತ್ರವನ್ನು ಅದಕ್ಕೆ ಅಂಟಿಸಿರತಕ್ಕದ್ದು ಮತ್ತು

(ಡಿ) ನೋಂದಣಿ ಅಧಿಕಾರಿಯ ನಕಲು ಸಹಿಯನ್ನು ಹೊಂದಿರತಕ್ಕದ್ದು.

ಮತ್ತೂ ಪರಂತು, ಮತದಾರನು ತನ್ನ ಭಾವಚಿತ್ರವನ್ನು ತೆಗೆದುಕೊಳ್ಳುವುದನ್ನು ನಿರಾಕರಿಸಿದರೆ ಅಥವಾ ಅಧಿಕೃತ ಛಾಯಾಗ್ರಾಹಕನಿಗೆ ಪುನರಾವರ್ತಿತ ಪ್ರಯತ್ನಗಳನ್ನು ಮಾಡಿದರೂ ಮತದಾರನು, ಆತನ ನಿವಾಸದಲ್ಲಿ ಕಂಡುಬರದಿದ್ದರೆ, ಅಂಥ ಮತದಾರನಿಗೆ ಯಾವುದೇ ಗುರುತಿನ ಚೀಟಿಯನ್ನು ಸಿದ್ಧಪಡಿಸತಕ್ಕದ್ದಲ್ಲ ಮತ್ತು ಅಂಥ ನಿರಾಕರಣೆ ಅಥವಾ ತಪ್ಪಿಸಿಕೊಂಡಿರುವುದರ ಬಗ್ಗೆ ಟಿಪ್ಪಣಿ ಅಥವಾ ಪುನರಾವರ್ತಿತ ಪ್ರಯತ್ನಗಳನ್ನು ಮಾಡಿದರೂ ಮತದಾರನು ತನ್ನ ನಿವಾಸದಲ್ಲಿ ಕಂಡುಬರದಿರುವುದನ್ನು ನೋಂದಣಿ ಅಧಿಕಾರಿಯು ನಿರ್ವಹಿಸಲಾದ ಮತದಾರರ ಪಟ್ಟಿಯ ಪ್ರತಿಯಲ್ಲಿ ನಮೂದಿಸತಕ್ಕದ್ದು.

(4) ಉಪ-ನಿಯಮ (3) ರ ಅಡಿಯಲ್ಲಿ ಸಿದ್ಧಪಡಿಸಿದ ಗುರುತಿನ ಚೀಟಿಯ ಒಂದು ಪ್ರತಿಯನ್ನು ನೋಂದಣಿ ಅಧಿಕಾರಿಯು ಇಟ್ಟುಕೊಳ್ಳತಕ್ಕದ್ದು ಮತ್ತು ಇನ್ನೊಂದು ಪ್ರತಿಯನ್ನು ಮತದಾನದ ಸಮಯದಲ್ಲಿ ಹಾಜರುಪಡಿಸುವುದಕ್ಕಾಗಿ ಆತನು ಇಟ್ಟುಕೊಳ್ಳಲು ಮತದಾರನಿಗೆ ತಲುಪಿಸತಕ್ಕದ್ದು.

**27. ಮತದಾರರ ಪಟ್ಟಿ ಮತ್ತು ಸಂಬಂಧಪಟ್ಟ ದಾಖಲೆ ಪತ್ರಗಳ ಅಭಿರಕ್ಷೆ ಮತ್ತು ಸಂರಕ್ಷಣೆ.-** (1) ವಾರ್ಡಿನ ಮತದಾರರ ಪಟ್ಟಿಯನ್ನು ಅಂತಿಮವಾಗಿ ಪ್ರಕಟಿಸಿದ ನಂತರ, ಈ ಮುಂದಿನ ದಾಖಲೆ ಪತ್ರಗಳನ್ನು ನೋಂದಣಿ ಅಧಿಕಾರಿಯ ಕಚೇರಿಯಲ್ಲಿ ಅಥವಾ ಜಿಲ್ಲಾ ಚುನಾವಣಾ ಅಧಿಕಾರಿಯು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸ್ಥಳದಲ್ಲಿ, ಆ ಮತದಾರರ ಪಟ್ಟಿಯ ಮುಂದಿನ ಸಮಗ್ರವಾದ ಪರಿಷ್ಕರಣೆ ಪೂರ್ಣಗೊಂಡ ನಂತರ ಒಂದು ವರ್ಷ ಮುಗಿಯುವವರೆಗೆ ಇಡತಕ್ಕದ್ದು,

(ಎ) ಮತದಾರರ ಪಟ್ಟಿಯ ಒಂದು ಪೂರ್ಣ ಪ್ರತಿ;

(ಬಿ) ನಿಯಮ 6ರ ಅಡಿಯಲ್ಲಿ ನೋಂದಣಿ ಅಧಿಕಾರಿಗೆ ಸಲ್ಲಿಸಿದ ವಿವರಣಾ ಪಟ್ಟಿಗಳು;

(ಸಿ) ಗಣತಿ ಅರ್ಜಿಗಳ ನೋಂದಣಿ;

(ಡಿ) ಮತದಾರರ ಪಟ್ಟಿಯ ತಯಾರಿಕೆಗೆ ಸಂಬಂಧಿಸಿದ ಅರ್ಜಿ;

(ಇ) ಗಣತಿ ಸಂಸ್ಥೆಗಳು ಸಿದ್ಧಪಡಿಸಿದ ಮತ್ತು ಮತದಾರರ ಪಟ್ಟಿಯನ್ನು ಸಂಕಲಿಸಲು ಬಳಸಿದ ಹಸ್ತಪ್ರತಿ ಭಾಗಗಳು;

(ಎಫ್) ಕ್ಲೇಮುಗಳು ಮತ್ತು ಆಕ್ಷೇಪಣೆಗಳಿಗೆ ಸಂಬಂಧಪಟ್ಟ ದಾಖಲೆ ಪತ್ರಗಳು; ಮತ್ತು

(ಜಿ) ನಿಯಮ 22ರ ಅಡಿಯಲ್ಲಿ ಮೇಲ್ಮನವಿಗಳಿಗೆ ಸಂಬಂಧಪಟ್ಟ ದಾಖಲೆ ಪತ್ರಗಳು.

(2) ನೋಂದಣಿ ಅಧಿಕಾರಿಯು ಕ್ರಮಬದ್ಧವಾಗಿ ದೃಢೀಕರಿಸಿದ ಪ್ರತಿ ವಾರ್ಡಿನ ಮತದಾರರ ಪಟ್ಟಿಯ ಒಂದು ಸಂಪೂರ್ಣ ಪ್ರತಿಯನ್ನು ಜಿಲ್ಲಾ ಚುನಾವಣಾ ಅಧಿಕಾರಿಯು ಶಾಶ್ವತ ದಾಖಲೆಯಾಗಿ ನಿರ್ದಿಷ್ಟಪಡಿಸಬಹುದಾದಂಥ ಸ್ಥಳದಲ್ಲಿ ಇಡತಕ್ಕದ್ದು.

**28. ಮತದಾರರ ಪಟ್ಟಿಗಳು ಮತ್ತು ಸಂಬಂಧಪಟ್ಟ ದಾಖಲೆ ಪತ್ರಗಳ ಪರಿಶೀಲನೆ.-** ಪ್ರತಿಯೊಬ್ಬ ವ್ಯಕ್ತಿಯು 27ನೇ ನಿಯಮದಲ್ಲಿ ಉಲ್ಲೇಖಿಸಲಾದ ಮತದಾರರ ಪಟ್ಟಿಗೆ ಸಂಬಂಧಪಟ್ಟ ದಾಖಲೆ ಪತ್ರಗಳನ್ನು ಪರಿಶೀಲಿಸುವ ಮತ್ತು ಜಿಲ್ಲಾ ಚುನಾವಣಾ ಅಧಿಕಾರಿಯು ನಿಗದಿಪಡಿಸಬಹುದಾದಂಥ ಶುಲ್ಕವನ್ನು ಪಾವತಿಸಿದ ನಂತರ ಅದರ ದೃಢೀಕೃತ ಪ್ರತಿಗಳನ್ನು ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು.

**29. ಮತದಾರರ ಪಟ್ಟಿಗಳು ಮತ್ತು ಸಂಬಂಧಪಟ್ಟ ದಾಖಲೆ ಪತ್ರಗಳನ್ನು ವಿಲೇವಾರಿ ಮಾಡುವುದು.-** (1) ನಿಯಮ 27ರಲ್ಲಿ ಉಲ್ಲೇಖಿಸಲಾದ ದಾಖಲೆ ಪತ್ರಗಳನ್ನು ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ಮೇಲೆ ಮತ್ತು ಈ ಬಗ್ಗೆ ರಾಜ್ಯ ಚುನಾವಣಾ ಆಯೋಗವು ನೀಡಬಹುದಾದಂಥ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳು ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು ಜಿಲ್ಲಾ ಚುನಾವಣಾ ಅಧಿಕಾರಿಯು ನಿರ್ದೇಶಿಸಬಹುದಾದ ರೀತಿಯಲ್ಲಿ ವಿಲೇವಾರಿ ಮಾಡತಕ್ಕದ್ದು.

(2) ಠೇವಣಿಗೆ ಮತ್ತು ಯಾವುದೇ ಇತರ ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯಪಡಿಸಲಾದ ಸಂಖ್ಯೆಯನ್ನು ಮೀರಿದ ಯಾವುದೇ ವಾರ್ಡಿನ ಮತದಾರರ ಪಟ್ಟಿಯ ಪ್ರತಿಗಳನ್ನು ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ಸಮಯದಲ್ಲಿ ಮತ್ತು ಅಂಥ ರೀತಿಯಲ್ಲಿ ವಿಲೇವಾರಿ ಮಾಡತಕ್ಕದ್ದು ಮತ್ತು ಅಂಥ ವಿಲೇವಾರಿಯನ್ನು ರಾಜ್ಯ ಚುನಾವಣಾ ಆಯೋಗವು ನಿಗದಿಪಡಿಸಿದ ಮೊತ್ತವನ್ನು ಪಾವತಿಸುವವರೆಗೆ ಸಾರ್ವಜನಿಕರಿಗೆ ಮಾರಾಟ ಮಾಡಲು ಲಭ್ಯವಾಗುವಂತೆ ಮಾಡತಕ್ಕದ್ದು.

**30. ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯನ್ನು ಅಳವಡಿಸಿಕೊಳ್ಳಲು ವಿಶೇಷ ಉಪಬಂಧ-** (1) ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಚುನಾವಣಾ ಆಯೋಗವು, ಅದು ಅಗತ್ಯವೆಂದು ಭಾವಿಸಿದರೆ, ಈ ಅಧಿನಿಯಮದ ಅಡಿಯಲ್ಲಿ ಚುನಾವಣೆಗಳ ಉದ್ದೇಶಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರ (1950ರ ಕೇಂದ್ರ ಅಧಿನಿಯಮ 43) ಅಡಿಯಲ್ಲಿ ಸಿದ್ಧಪಡಿಸಲಾದ ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಗಣತಿ ನಡೆಸದೆ ನಗರ ಪಾಲಿಕೆಗಳ ಮತದಾರರ ಪಟ್ಟಿಗಳನ್ನು ಸಿದ್ಧಪಡಿಸಬಹುದು.

(2) ಉಪ-ನಿಯಮ (1)ರ ಅಡಿಯಲ್ಲಿ ಅಂಗೀಕರಿಸಲಾದಂತೆ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯನ್ನು ನಗರ ಪಾಲಿಕೆಯ ಪ್ರತಿಯೊಂದು ವಾರ್ಡ್‌ಗೆ ಪ್ರತ್ಯೇಕ ಭಾಗಗಳಾಗಿ ವಿಂಗಡಿಸತಕ್ಕದ್ದು ಮತ್ತು ಅದಕ್ಕೆ ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಸೇರಿಸಲಾದ ಎಲ್ಲಾ ಮತದಾರರನ್ನು ಸಂಬಂಧಪಟ್ಟ ನಗರ ಪಾಲಿಕೆಯ ವಾರ್ಡ್‌ಗಳ ಮತದಾರರ ಪಟ್ಟಿಯಲ್ಲಿ ಸೇರಿಸತಕ್ಕದ್ದು.

(3) ಉಪ-ನಿಯಮ (1)ರ ಅಡಿಯಲ್ಲಿ ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವಾಗ, ರಾಜ್ಯ ಚುನಾವಣಾ ಆಯೋಗವು, ಈ ಅಧಿನಿಯಮದ ಮೇರೆಗೆ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಮೇರೆಗೆ ಮತದಾರ ಪಟ್ಟಿಗಳನ್ನು ತಯಾರಿಸಲು ನಿಗದಿಪಡಿಸಿದ ಕಾರ್ಯವಿಧಾನವನ್ನು ಉಚಿತ ವ್ಯತ್ಯಾಸಗಳೊಂದಿಗೆ ಅನುಸರಿಸತಕ್ಕದ್ದು:

ಪರಂತು, ನಗರಪಾಲಿಕೆಗಳ ಅಂಥ ವಾರ್ಡ್‌ಗಳ ಮತದಾರರ ಪಟ್ಟಿಯಲ್ಲಿ ಅಂಥ ವಾರ್ಡ್‌ನ ಚುನಾವಣೆಗೆ ನಾಮಪತ್ರ ಸಲ್ಲಿಸಲು ಇದ್ದ ಕೊನೆಯ ದಿನಾಂಕದ ತರುವಾಯ ಮತ್ತು ಅಂಥ ಚುನಾವಣೆ ಪೂರ್ಣಗೊಳ್ಳುವ ಮೊದಲು ಮಾಡಿದ ಯಾವುದೇ ತಿದ್ದುಪಡಿ, ಬದಲಾವಣೆ, ಸೇರ್ಪಡೆ ಅಥವಾ ನಮೂದನ್ನು ತೆಗೆದುಹಾಕುವುದು ಒಳಗೊಂಡಿರತಕ್ಕದ್ದಲ್ಲ.

31. **ಜಿಲ್ಲಾ ಚುನಾವಣಾ ಅಧಿಕಾರಿಗಳು, ಇತರರು, ರಾಜ್ಯ ಚುನಾವಣಾ ಆಯೋಗಕ್ಕೆ ನಿಯೋಜನೆಯಲ್ಲಿದ್ದಾರೆಂದು ಪರಿಗಣಿಸುವುದು.-** ಈ ನಿಯಮಗಳಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳು ಮತ್ತು ಮತದಾರರ ಪಟ್ಟಿಗಳ ತಯಾರಿಕೆ, ಪರಿಷ್ಕರಣೆ ಮತ್ತು ತಿದ್ದುಪಡಿಗೆ ಸಂಬಂಧಿಸಿದಂತೆ ನೇಮಿಸಲಾದ ಯಾವುದೇ ಇತರ ಅಧಿಕಾರಿ ಅಥವಾ ಸಿಬ್ಬಂದಿಯನ್ನು ಅವರು ನೇಮಕಗೊಂಡಿರುವ ಅವಧಿಗೆ ರಾಜ್ಯ ಚುನಾವಣಾ ಆಯೋಗಕ್ಕೆ ನಿಯೋಜನೆಯಲ್ಲಿದ್ದಾರೆಂದು ಪರಿಗಣಿಸಲಾಗುತ್ತದೆ ಮತ್ತು ಅಂತಹ ಅಧಿಕಾರಿಗಳು ಮತ್ತು ಸಿಬ್ಬಂದಿ ಆ ಅವಧಿಯಲ್ಲಿ ರಾಜ್ಯ ಚುನಾವಣಾ ಆಯೋಗದ ನಿಯಂತ್ರಣ, ಮೇಲ್ವಿಚಾರಣೆ ಮತ್ತು ಶಿಸ್ತಿಗೆ ಒಳಪಟ್ಟಿರುತ್ತಾರೆ.

32. **ಮತದಾರರ ಪಟ್ಟಿಯ ತಯಾರಿಕೆ, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಧಿಕೃತ ಕರ್ತವ್ಯದ ಉಲ್ಲಂಘನೆ.**— ಮತದಾರರ ಪಟ್ಟಿಯ ತಯಾರಿಕೆ, ಪರಿಷ್ಕರಣೆ ಅಥವಾ ತಿದ್ದುಪಡಿ ಅಥವಾ ಆ ಪಟ್ಟಿಯಲ್ಲಿ ಅಥವಾ ಅದರಿಂದ ಯಾವುದೇ ನಮೂದನ್ನು ಸೇರಿಸುವುದು ಅಥವಾ ಹೊರಗಿಡುವುದಕ್ಕೆ ಸಂಬಂಧಿಸಿದಂತೆ ಯಾವುದೇ ಅಧಿಕೃತ ಕರ್ತವ್ಯವನ್ನು ನಿರ್ವಹಿಸಲು ಈ ನಿಯಮಗಳಿಂದ ಅಥವಾ ಅಡಿಯಲ್ಲಿ ಅಗತ್ಯವಿರುವ ಯಾವುದೇ ಚುನಾವಣಾ ನೋಂದಣಿ ಅಧಿಕಾರಿ, ಸಹಾಯಕ ಚುನಾವಣಾ ನೋಂದಣಿ ಅಧಿಕಾರಿ ಅಥವಾ ಇತರ ವ್ಯಕ್ತಿಯು ಸಮಂಜಸವಾದ ಕಾರಣವಿಲ್ಲದೆ, ಅಂತಹ ಅಧಿಕೃತ ಕರ್ತವ್ಯದ ಉಲ್ಲಂಘನೆಯಲ್ಲಿ ಯಾವುದೇ ಕೃತ್ಯ ಅಥವಾ ಲೋಪಕ್ಕೆ ತಪ್ಪಿತಸ್ಥರಾಗಿದ್ದರೆ, ಅದು ಗಂಭೀರ ದುರ್ನಡತೆಯಾಗುತ್ತದೆ ಮತ್ತು ಅವರು ಜಿಲ್ಲಾ ಚುನಾವಣಾ ಅಧಿಕಾರಿಯ ಶಿಫಾರಸಿನ ಮೇರೆಗೆ ಶಿಸ್ತು ಕ್ರಮಕ್ಕೆ ಹೊಣೆಗಾರರಾಗಿರುತ್ತಾರೆ ಹಾಗೂ ಶಿಸ್ತು ಪ್ರಾಧಿಕಾರವು ಇದಕ್ಕೆ ಬದ್ಧವಾಗಿರಬೇಕು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ನಂದಕುಮಾರ್ ಬಿ.)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ
(ಜಿಬಿಎ & ಬೆಂಗಳೂರು ನಗರ ಪಾಲಿಕೆಗಳು-2
ಮತ್ತು ಸಮನ್ವಯ)

ನಮೂನೆ ಸಂ.-1
(ನಿಯಮ 4 ಅನ್ನು ನೋಡಿ)
ಮತದಾರರ ಪಟ್ಟಿ 20.........................

.................................................(ನಗರ ಪಾಲಿಕೆಯ ಹೆಸರು) ವಾರ್ಡ್..............................................................(ವಾರ್ಡಿನ ಸಂಖ್ಯೆ)

ಭಾಗ.....................

ಮತದಾನ ಕೇಂದ್ರದ ಹೆಸರು.........................................
ಮತದಾನ ಕೇಂದ್ರಕ್ಕೆ ನಿಗದಿಪಡಿಸಿದ ಸಂಖ್ಯೆ..............................
ಮತದಾನ ಕೇಂದ್ರದ ವಿಸ್ತೀರ್ಣ......................................

| ಕ್ರ.ಸಂ. | ಮನೆ ಸಂಖ್ಯೆ ಮತ್ತು ಮನೆಯ ಹೆಸರು(ಆವರಣದಲ್ಲಿ) | ಮತದಾರನ ಹೆಸರು | ತಂದೆ/ತಾಯಿ/ಗಂಡನ ಹೆಸರು | ಪುರುಷ/ಸ್ತ್ರೀ | 20------ರ 1ನೇ ಏಪ್ರಿಲ್ /ಜುಲೈ /ಅಕ್ಟೋಬರ್‌ಗೆ ಅವರ ವಯಸ್ಸು |
|---|---|---|---|---|---|
| (1) | (2) | (3) | (4) | (5) | (6) |

ಮತದಾರರ ನೋಂದಣಿ ಅಧಿಕಾರಿ
ಕ್ರ.ಸಂ.......................
...................................
ಪಟ್ಟಿ.................20.........................
ಭಾಗ........................
ತಿದ್ದುಪಡಿ 20...................ರ ಪಟ್ಟಿ
.......................(ವರ್ಷ)

ಸೇರ್ಪಡೆಗಳು

| ಕ್ರ.ಸಂ. | ಮನೆ ಸಂಖ್ಯೆ ಮತ್ತು ಮನೆಯ ಹೆಸರು(ಆವರಣದಲ್ಲಿ) | ಮತದಾರನ ಹೆಸರು | ತಂದೆ/ತಾಯಿ/ಗಂಡನ ಹೆಸರು | ಪುರುಷ/ಸ್ತ್ರೀ | 20---ರ 1ನೇ ಎಪ್ರೀಲ್ /ಜುಲೈ /ಅಕ್ಟೋಬರ್ ಗೆ ಅವರ ವಯಸ್ಸು |
|---|---|---|---|---|---|
| (1) | (2) | (3) | (4) | (5) | (6) |

**ತಿದ್ದುಪಡಿಗಳು**

| ನಮೂದಿನ ಕ್ರ.ಸಂ. | ಮತದಾರನ ಹೆಸರು | ಚಾಲ್ತಿಯಲ್ಲಿರುವ ನಮೂದಿಗಾಗಿ | ಓದು (ಸರಿಯಾದ ನಮೂದು) |
|---|---|---|---|
